ಸಂಪುಟ 01 | ಸಂಚಿಕೆ 153 ಶನಿವಾರ 08 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಭಾರತ ಬಿಟ್ಟು ತೊಲಗಿ ಚಳವಳಿ ದಿನ (Quit India Movement Day):
1942ರಲ್ಲಿ ಮಹಾತ್ಮ ಗಾಂಧೀಜಿಯವರ "ಮಾಡು ಇಲ್ಲವೇ ಮಡಿ" (Do or Die) ಎಂಬ ಘೋಷಣೆಯೊಂದಿಗೆ ಬ್ರಿಟಿಷರ ಆಳ್ವಿಕೆಯನ್ನು ಕೊನೆಗೊಳಿಸುವಂತೆ ಒತ್ತಾಯಿಸಿ ಭಾರತ ಬಿಟ್ಟು ತೊಲಗಿ ಚಳವಳಿ ಆರಂಭವಾದ ದಿನವನ್ನು ಸ್ಮರಿಸಲಾಗುತ್ತದೆ.

2) ಅಂತರರಾಷ್ಟ್ರೀಯ ಬೆಕ್ಕು ದಿನ (International Cat Day):
2002ರಲ್ಲಿ International Fund for Animal Welfare (IFAW) ಸಂಸ್ಥೆಯಿಂದ ಆರಂಭಿಸಲಾಯಿತು. ಬೆಕ್ಕುಗಳ ದತ್ತು ಸ್ವೀಕಾರ, ಸುರಕ್ಷತೆ ಮತ್ತು ಆರೈಕೆಯ ಕುರಿತು ಜಾಗೃತಿ ಮೂಡಿಸುವುದು ಇದರ ಉದ್ದೇಶ.

3) ಹ್ಯಾಪಿನೆಸ್ ಹ್ಯಾಪನ್ಸ್ ಡೇ
(Happiness Happens Day):
ದೈನಂದಿನ ಜೀವನದಲ್ಲಿ ಸಂತೋಷವನ್ನು ಗುರುತಿಸುವುದು, ಅನುಭವಿಸುವುದು ಮತ್ತು ಇತರರೊಂದಿಗೆ ಹಂಚಿಕೊಳ್ಳುವುದನ್ನು ಉತ್ತೇಜಿಸುವ ದಿನ.

## ಸುಭಾಷಿತ

ಬಾಳು ಎನ್ನುವುದು ಏನು? ಯೋಚನೆ, ಮಾತು, ಕೆಲಸ. ಯೋಚನೆ, ಮಾತು ಚಂದವಾಗಿರಲಿ. ಚೆಂದವಾದ ಕೆಲಸ ಯಾವುದೋ ಅದನ್ನು ಮಾಡು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

# ಡಾ. ನಾಗರಾಜ್ ಕಾಟ್ವಾ ನೇತೃತ್ವದಲ್ಲಿ ಉನ್ನತ ಸಾಧನೆ

## ಗರ್ಭನಾಳ ಮರು ಜೋಡಣಾ ಶಸ್ತ್ರಚಿಕಿತ್ಸೆಯನ್ನು ಮಾಡಿದ ಕರ್ನಾಟಕ ರಾಜ್ಯದಲ್ಲಿ ಮೊದಲ ಸಮುದಾಯ ಆರೋಗ್ಯ ಕೇಂದ್ರ – ತುರವಿಹಾಳ

❑ ನೈಜ್ಯ ದೆಸೆ ನ್ಯೂಸ್

ತುರವಿಹಾಳ:ಸಮುದಾಯ ಆರೋಗ್ಯ ಕೇಂದ್ರ ತುರವಿಹಾಳದಲ್ಲಿ ದಿನಾಂಕ: 06/08/2026 ರಂದು ಗರ್ಭನಾಳ ಮರು ಜೋಡಣಾ ಶಸ್ತ್ರಚಿಕಿತ್ಸೆ (Tubal Reperfusion Surgery) ಯನ್ನು ಯಶಸ್ವಿಯಾಗಿ ಮಾಡಲಾಯಿತು. ಗರ್ಭನಾಳ ಮರು ಜೋಡಣಾ ಶಸ್ತ್ರಚಿಕಿತ್ಸೆಯನ್ನು ಮಾಡಿದ ಕರ್ನಾಟಕ ರಾಜ್ಯದ ಅತ್ಯಂತ ಮೊದಲ ಸಮುದಾಯ ಆರೋಗ್ಯ ಕೇಂದ್ರ ಇದಾಗಿದೆ.



**ಶಸ್ತ್ರಚಿಕಿತ್ಸೆಯ ಮಹತ್ವ ಹಾಗೂ ಅಗತ್ಯತೆ:**
ಗರ್ಭನಾಳ ಮರು ಜೋಡಣಾ ಶಸ್ತ್ರಚಿಕಿತ್ಸೆಯನ್ನು ಸಂತಾನಹರಣ ಶಸ್ತ್ರಚಿಕಿತ್ಸೆಯ ನಂತರ ಒಂದು ಮಗುವಿದ್ದು ಮತ್ತೊಂದು ಮಗುವನ್ನು ಬಯಸಿದರೆ, ಮತ್ತು ಒಂದು ಮಗು ಇದ್ದು ಆ ಮಗು ತೀರಿ ಹೋಗಿ ಮತ್ತೊಂದು ಮಗುವನ್ನು ಪಡೆಯಲು ಇಚ್ಛಿಸಿದರೆ ಹಾಗೂ ವಿಧವೆಯಾಗಿದ್ದು ಮತ್ತೊಂದು ಮದುವೆಯಾಗಿದ್ದು ಅವರು ಮಗುವನ್ನು ಪಡೆಯಲು ಬಯಸಿದರೆ ಇಂತಹ ಸಂದರ್ಭಗಳಲ್ಲಿ ಈ ಗರ್ಭನಾಳ ಮರು ಜೋಡಣಾ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುತ್ತದೆ. ಈ ಶಸ್ತ್ರ ಚಿಕಿತ್ಸೆಯನ್ನು ಮಾಡದೇ ಹೋದರೆ ಮಗುವನ್ನು ಪಡೆಯಲು ಕೃತಕ ಗರ್ಭಧಾರಣೆ (IVF) ಗೆ ಮೊರೆಹೋಗಬೇಕಾಗುತ್ತದೆ

**ಆರ್ಥಿಕ ಉಳಿತಾಯ ಹಾಗೂ ಉಚಿತ ಸೇವೆ:**
ಕೃತಕ ಗರ್ಭಧಾರಣೆಯಿಂದ ಮಗುವನ್ನು ಪಡೆಯಲು 2 ರಿಂದ 3 ಲಕ್ಷ ರೂಪಾಯಿಗಳ ವೆಚ್ಚ ತಗುಲುತ್ತದೆ. ಆದರೆ ಗರ್ಭನಾಳ ಶಸ್ತ್ರ ಚಿಕಿತ್ಸೆಯನ್ನು ಮಾಡುವುದರಿಂದ ಸಹಜವಾಗಿ ಗರ್ಭ ಧರಿಸುವುದರಿಂದ ಮಗುವನ್ನು ಪಡೆಯಬಹುದು. ಅಲ್ಲದೇ ಈ ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿದರೆ 1 ರಿಂದ 2 ಲಕ್ಷ ವೆಚ್ಚ ತಗುಲುತ್ತದೆ. ಆದರೆ ನಮ್ಮ ಸಮುದಾಯ ಆರೋಗ್ಯ ಕೇಂದ್ರ ತುರವಿಹಾಳದಲ್ಲಿ ಗರ್ಭನಾಳ ಮರು ಜೋಡಣಾ ಶಸ್ತ್ರ ಚಿಕಿತ್ಸೆಯನ್ನು ಸಂಪೂರ್ಣ ಉಚಿತವಾಗಿ ಮಾಡಲಾಗಿದೆ.

**ವೈದ್ಯಕೀಯ ಹಾಗೂ ಸಿಬ್ಬಂದಿ ತಂಡ:** ಗರ್ಭನಾಳ ಶಸ್ತ್ರ ಚಿಕಿತ್ಸೆಯನ್ನು ಸಿಂಧನೂರಿನ ಪ್ರಖ್ಯಾತ ಪ್ರಸೂತಿ ಹಾಗೂ ಸ್ತ್ರೀ ರೋಗ ತಜ್ಞರಾದ ಡಾ. ನಾಗರಾಜ ನೆರವೇರಿಸಿದರು.ಈ ಸಂದರ್ಭದಲ್ಲಿ:ಅರವಳಿಕೆ ತಜ್ಞರು: ಡಾ. ಕೋಣಿಕ,ವೈದ್ಯಾಧಿಕಾರಿಗಳ ಡಾ. ವಿರೂಪಾಕ್ಷ,ಶುಶ್ರೂಷಾಧಿಕಾರಿಗಳು,ಶ್ರೀಮತಿ ಮಮತಾ, ಕು. ಹಸೀನಾ, ಶ್ರೀಮತಿ ಸ್ವಪ್ನಾಂಜಲಿ, ಡಿ.ಗ್ರೂಪ್ ಸಿಬ್ಬಂದಿಗಳು: ಕೆ. ಶಹಜಾ, ಕು. ಬಸವರಾಜ, ಶ್ರೀ ಶರಣಬಸಪ್ಪ, ಶ್ರೀಮತಿ ದುರ್ಗಮ್ಮ, ಶ್ರೀಮತಿ ಹನುಮಮ್ಮ,ಆಶಾ ಕಾರ್ಯಕರ್ತೆ: ಶ್ರೀಮತಿ ರೇಣುಕಾ ಅವರು ಉಪಸ್ಥಿತರಿದ್ದು ಯಶಸ್ವಿಯಾಗಿ ಸಹಕರಿಸಿದರು.

**ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಪ್ರಶಂಸೆ:**
ಕರ್ನಾಟಕದ ರಾಜ್ಯದಲ್ಲಿ ಮೊದಲ ಬಾರಿಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂತಹ ಸೂಕ್ಷ್ಮ ಮತ್ತು ವಿರಳ ಶಸ್ತ್ರ ಚಿಕಿತ್ಸೆಯನ್ನು ನಡೆಸಿದ ವೈದ್ಯಕೀಯ ತಂಡಕ್ಕೆ ಮಾನ್ಯ ಶಾಸಕರಾದ ಶ್ರೀ ಆರ್. ಬಸನಗೌಡ ತುರವಿಹಾಳ ಇವರು ಸ್ವತಃ ಆಸ್ಪತ್ರೆಗೆ ಭೇಟಿ ನೀಡಿ ರೋಗಿಯ ಆರೋಗ್ಯವನ್ನು ವಿಚಾರಿಸಿ ವೈದ್ಯಕೀಯ ತಂಡವನ್ನು ಶ್ಲಾಘಿಸಿದರು. ಜೊತೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು (DHO) ಹಾಗೂ ಸಾರ್ವಜನಿಕರು ಆಸ್ಪತ್ರೆಯ ಈ ಅಪರೂಪದ ಸಾಧನೆಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.



## ಪ್ರತಿಭಟನಾ ರ್‍ಯಾಲಿ ಕುರಿತು ಪೂರ್ವ ಭಾವಿ ಸಭೆ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ರಾಜ್ಯವನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಆಗ್ರಹಿಸಿ ಬೃಹತ್ ಪ್ರತಿಭಟನಾ ರ್‍ಯಾಲಿ



ಮಾಡುವ ಸಲುವಾಗಿ ಇಂದು (ಆ.8) ರಂದು ಪೂರ್ವಭಾವಿ ಸಭೆಯನ್ನು ಬೆಳಿಗ್ಗೆ 11 ಘಂಟೆಗೆ ಪಟ್ಟಣದ ಶ್ರೀ ವಿಠ್ಠಲ ಮಂದಿರದಲ್ಲಿ ಕರೆಯಲಾಗಿದ್ದು, ಸಭೆಯ ನೇತೃತ್ವವನ್ನು ಬಿಜೆಪಿ ರಾಜ್ಯ ರೈತ ಮೋರ್ಚಾ ರಾಜ್ಯಾಧ್ಯಕ್ಷರಾದ ಎ ಎಸ್ ಪಾಟೀಲ ನಡಹಳ್ಳಿ ಅವರು ವಹಿಸಲಿದ್ದಾರೆ.ಕಾರಣ ಯಾವತ್ತೂ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ತಪ್ಪದೇ ಪೂರ್ವಭಾವಿ ಸಭೆಗೆ ಆಗಮಿಸಬೇಕೆಂದು ಪಕ್ಷದ ಪ್ರಕಟಣೆ ತಿಳಿಸಿದೆ.

## ವಸತಿ ಯೋಜನೆಗಳ ಅರಿವು ಮೂಡಿಸಲು ವಿದ್ಯಾರ್ಥಿಗಳಿಂದ ಸೃಜನಾತ್ಮಕ ಸ್ಪರ್ಧೆಗಳು: ವಿಜೇತರಿಗೆ ಬಹುಮಾನ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಯಚೂರು ಮಹಾನಗರ ಪಾಲಿಕೆ ವತಿಯಿಂದ ರಾಜೀವ್ ಗಾಂಧಿ ನಗರ ವಸತಿ ಯೋಜನೆ ಹಾಗೂ ಪ್ರಧಾನ ಮಂತ್ರಿ ಆವಾಸ್ ಯೋಜನೆ?2.0 ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪ್ರಬಂಧ, ಚಿತ್ರಕಲೆ, ರಸಪ್ರಶ್ನೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ, ವಿಜೇತರಿಗೆ ಬಹುಮಾನ ಹಾಗೂ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಉಪ ಆಯುಕ್ತ ಶರಣಪ್ಪ ಬಿ. ಮಾತನಾಡಿ, ಪ್ರತಿಯೊಬ್ಬ ನಾಗರಿಕನಿಗೂ ಘನತೆಯಿಂದ ಬದುಕಲು ಸ್ವಂತ ಮನೆ ಅತ್ಯಗತ್ಯವಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವಸತಿ ರಹಿತ ಕುಟುಂಬಗಳಿಗೆ ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ಜಾರಿಗೊಳಿಸಿದ್ದು,




ವಿದ್ಯಾರ್ಥಿಗಳು ಈ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿ ಪಡೆದು ತಮ್ಮ ಕುಟುಂಬದವರಿಗೂ ಹಾಗೂ ಸಾರ್ವಜನಿಕರಿಗೂ ತಿಳಿಸುವ ಮೂಲಕ ಸಮಾಜದಲ್ಲಿ ಅರಿವು ಮೂಡಿಸಬೇಕು ಎಂದು ಕರೆ ನೀಡಿದರು.

ಮಹಾನಗರ ಪಾಲಿಕೆಯ ಆಡಳಿತಾಧಿಕಾರಿ (ಕಂದಾಯ) ಕೃಷ್ಣ ಶಾವಂಗೆರ ಮಾತನಾಡಿ, ಪಾಲಿಕೆ ಆಯುಕ್ತರ ಮಾರ್ಗದರ್ಶನ ಹಾಗೂ ನಿರ್ದೇಶನದಂತೆ ನಗರದಲ್ಲಿ ವಸತಿ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಸರ್ಕಾರದ ಯೋಜನೆಗಳ ರಾಯಭಾರಿಗಳಾಗಿ ಕಾರ್ಯನಿರ್ವಹಿಸಿದರೆ ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಸೌಲಭ್ಯ ಸುಲಭವಾಗಿ ತಲುಪಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಂಸಾ ಪತ್ರ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ವಸತಿ ಯೋಜನೆಗಳ ಅರ್ಹತೆ, ಅರ್ಜಿ ಸಲ್ಲಿಕೆ ವಿಧಾನ ಹಾಗೂ ಯೋಜನೆಗಳ ಉದ್ದೇಶದ ಕುರಿತು ಅಧಿಕಾರಿಗಳು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಅಧಿಕಾರಿಗಳು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನನ್ನ ಅವದಿಯ ಕೆಲಸಗಳೆ ಆರುವರ್ಷವಾದರೂ ನೆನಗುದಿಗೆ,ಅಭಿವೃದ್ಧಿ ಕುಂಠಿತ :ಪ್ರತಾಪಗೌಡ ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ್ ಹಾಲಾಪೂರದಲ್ಲಿ ಮಾತನಾಡಿ ಕ್ಷೇತ್ರದಲ್ಲಿ ನನ್ನ ಅವಧಿಯಲ್ಲಿ ತಂದ ಕೆಲಸಗಳೆ ಇನ್ನೂ ನೆನಗುದಿಗೆ ಬಿದ್ದಿವೆ,ಅಭಿವೃದ್ಧಿ ಕುಂಠಿತ,ಇದಕ್ಕೆ ಸಾಕ್ಷಿಯಂಬಂತೆ ಹಾಲಾಪೂರದ ಸಾನಬಾಳ ,

ನಾಗಲದಿನ್ನಿ ಮುಖ್ಯಕಾಲುವೆ ಸೇತುವೆ ಇನ್ನೂ ಮುಂತಾದವು ಕಳೆದ ಆರು ವರ್ಷಗಳಿಂದ ಕಾಮಗಾರಿಗಳು ನೆನಗುದಿಗೆ ಬಿದ್ದಿವೆ,ಸರಕಾರದಲ್ಲಿ ಹಣ ಇಲ್ಲ,ಖಾಲಿ ಬೊಕ್ಕಸೆ,ರಾಜ್ಯದಲ್ಲಿ ಶಾಸಕರು ಮಂತ್ರಿಲಾಭಿಗಾಗಿ ಕಿತ್ತಾಟ ಕ್ಷೇತ್ರದ,ಬೀಕರ ಬರಗಾಲದಿಂದ ಜನ ಕೆಂಗಟ್ಟಿದ್ದಾರೆ ಲೆಕ್ಕವೆಇಲ್ಲ ತಮ್ಮ ಮಂತ್ರಿಪಟ್ಟ, ಇಷ್ಟದ ಖಾತೆಗೆ ಮುಗಿಬಿದ್ದಿದ್ದು ಜನರ ಸಮಸ್ಯೆ ಗಾಳಿಗೆ ತೂರಿದ್ದಾರೆ,ಇದರಿಂದ ಇಡಿ



ರಾಜ್ಯದ ತತ್ತರಿಸಿ ಹೋಗಿದ್ದಾರೆ,ಮಸ್ಕಿ ಕ್ಷೇತ್ರದಲ್ಲಿ ಅಕ್ರಮ ಚಟುವಟಿಕೆಗಳಾದ ಇಸ್ಪೀಟು, ಮಟ್ಕಾ,ಅಕ್ರಮ ಮರಳು ದಂದೆ ಶಾಸಕರ ಕುಮ್ಮಕ್ಕಿನಿಂದ ಅಧಿಕಾರಿಗಳ ಭಯ ಇಲ್ಲದಂತೆಯಾಗಿದೆ ಎಂದು ಹೇಳಿದರು.

ಈ ವೇಳೆಯಲ್ಲಿ ಜಗದೀಶಚಂದ್ರಸ್ವಾಮಿ ಅದ್ಯಕ್ಷರು ಕೃಷಿ ಪತ್ತಿನ ಸಹಕಾರಿ, ಎರಿತಾತ ಜಂಗಮರಹಳ್ಳಿ, ಚಂದ್ರಕಾಂತಗೌಡ ಪಾಟೀಲ್,ಈ–ರನಗೌಡ ದಳಪತಿ,ಶರಣೆಗೌಡ ತೊರಣದಿನ್ನಿ, ಚನ್ನಬಸವ ಮಾ.ಪಾ, ಜಮದಗ್ನಿ ನಾಯಕ, ವಿರಪಾಕ್ಷಿ ಎಚ್ ಕೆ, ಆದಪ್ಪ ತುಂಟಾಪೂರ,ನಾಗರಾಜ ಇನ್ನಿತರರು ಇದ್ದರು.

## ಮುಖ್ಯಕಾಲುವೆಗೆ ದೊಡ್ಡಮಟ್ಟದ ಬೊಂಗಾ,ತೀವ್ರ ಅಪಾಯಕಾರಿ,ಅಧಿಕಾರಿಗಳ ಯಡವಟ್ಟು

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ ಸಮೀಪದ ತುಂಗಭದ್ರಾ ಮುಖ್ಯ ಕಾಲುವೆ 65 ಜೊಳದರಾಶಿಕ್ಯಾಂಪ ಹಾಗೂ ಗೂಗೆಬಾಳ 71 ಕಾಲುವೆ ಗೆಟ್ ಸೆಟಾರ ಸಂಪೂರ್ಣ ಹಾಳಾಗಿ ತಿಂಗಳುಗಳೆ ಕಳೆದಿದೆ ಹಾಗೆ ಸ್ವಲ್ಪ ಪಕ್ಕದಲ್ಲಿ ದೊಡ್ಡಮಟ್ಟದ ಬೊಂಗಾಬಿದ್ದು,ಕಾಲುವೆ ತೀವ್ರ ಅಪಾಯಂಚಿನಲ್ಲಿದ್ದರು ಎಚ್ಚತ್ತಕೊಳ್ಳದ ಅಧಿಕಾರಿಗಳೆ ನಡೆ ನಿಜಕ್ಕೂ ನಾಚಿಕೆಯ ಸಂಗತಿ,ಈಗಾಗಲೇ ರೈತರು ಮಳೆಬೆಳೆ ಇಲ್ಲದೆ ಬೆಸದು ಬೆಂದಿದ್ದಾರೆ.

ಇದಕ್ಕೆ ಅಧಿಕಾರಿಗಳ ಎಡವಟ್ಟು ನಿಷ್ಕಾಲಾಜಿ, ಇಂದು ಸ್ಥಳಕ್ಕೆ ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ್,ಗಂಗಾಧರ ನಾಯಕ ಮುಖಂಡರಾದ ಶರಣಪ್ಪಗೌಡ ಜಾಡಲದಿನ್ನಿ ನೇತೃತ್ವದಲ್ಲಿ ನೂರಾರು ರೈತರ ಜೊತೆಯಲ್ಲಿ ಕಾಲುವೆ ವೀಕ್ಷಿಸಿ ನಂತರ



ಅಧಿಕಾರಿಗಳ ಕರ್ತವ್ಯಲೋಪದೊಷ,ರೈತರ ಜೊತೆ ಆಡುವ ಚೆಲ್ಲಾಟವನ್ನು ತೀವ್ರವಾಗಿ ಖಂಡಿಸಿ ಮಾತನಾಡಿ ಇನ್ನೂ ಒಂದು ವಾರದಲ್ಲಿ ಕೆಲಸ ಮಾಡಿಸಿ ರೈತರಿಗೆ ಅನುಕೂಲ ಮಾಡಬೇಕು ಇಲ್ಲವಾದರೆ ನಿಮ್ಮ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಲಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅದ್ಯಕ್ಷ ಜಗದೀಶಚಂದ್ರಸ್ವಾಮಿ, ಚಂದ್ರಕಾಂತಗೌಡ ಗೊಗೆಬಾಳ, ಎರಿತಾತ ಜಂಗಮರಹಳ್ಳಿ, ಶರಣೆಗೌಡ ತೊರಣದಿನ್ನಿ, ಈರನಗೌಡ ದಳಪತಿ, ಮೃತ್ಯಂಜಯ್ಯಸ್ವಾಮಿ ಗೂಗೆಬಾಳ ಹಾಗೂ ಇನ್ನೂ ನೂರಾರು ರೈತರು ಜಮಾಯಿಸಿ ನೀರಾವರಿ ಅಧಿಕಾ–ರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಭೂಮಾನಂದ ಹತ್ಯೆ ಪ್ರಕರಣ: ತ್ವರಿತ ತನಿಖೆ, ಎಲ್ಲಾ ಆರೋಪಿಗಳ ಬಂಧನಕ್ಕೆ ಜಿಲ್ಲಾಡಳಿತಕ್ಕೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ಜನರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿರುವ ಭೂಮಾನಂದ ಅವರ ಬರ್ಬರ ಹತ್ಯೆ ಪ್ರಕರಣದ ತನಿಖೆಯನ್ನು ತ್ವರಿತಗೊಳಿಸಿ, ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಪ್ರಕಾರ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಇಂದು ರಾಯಚೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ–ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರಕರಣದ ತನಿಖೆಯ ಪ್ರಗತಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು. ಈಗಾಗಲೇ ಕೈಗೊಂಡಿರುವ ತನಿಖಾ ಕ್ರಮಗಳ ಕುರಿತು ಚರ್ಚೆ ನಡೆಸಿ, ಪ್ರಕರಣದ




ಪ್ರತಿಯೊಂದು ಆಯಾಮವನ್ನು ವೈಜ್ಞಾನಿಕ ಹಾಗೂ ನಿಷ್ಪಕ್ಷಪಾತ ರೀತಿಯಲ್ಲಿ ತನಿಖೆ ನಡೆಸಿ ಯಾವುದೇ ಆರೋಪಿಯೂ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು. ಭೂಮಾನಂದ ಅವರ ಹತ್ಯೆಯಿಂದ ಕುಟುಂಬ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಅವರ ಕುಟುಂಬ ಸದಸ್ಯರಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು. ಜೊತೆಗೆ ಸರ್ಕಾರದಿಂದ ತಕ್ಷಣ ಪರಿಹಾರ ಧನ, ಜೀವನೋಪಾಯಕ್ಕೆ ಅಗತ್ಯ ನೆರವು ಹಾಗೂ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಮನವಿ ಮಾಡಲಾಯಿತು.

ಪ್ರಕರಣವನ್ನು ಯಾವುದೇ ರೀತಿಯ ಒತ್ತಡ ಅಥವಾ ಪ್ರಭಾವಕ್ಕೆ ಒಳಗಾಗದಂತೆ ತನಿಖೆ ನಡೆಸಿ, ಶೀಘ್ರದಲ್ಲೇ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿ ನ್ಯಾಯಾಲಯದಲ್ಲಿ ತ್ವರಿತ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಯಿತು. ಜಿಲ್ಲೆಯಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮರಸ್ಯ ಕಾಪಾಡುವುದು ಎಲ್ಲರ ಜವಾಬ್ದಾ–ರಿಯಾಗಿದೆ. ಆದ್ದರಿಂದ ಸಮಾಜದ ಎಲ್ಲಾ ವರ್ಗದ ಮುಖಂಡರೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ, ವದಂತಿಗಳಿಗೆ ಅವಕಾಶ ನೀಡದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಭೂಮಾನಂದ ಅವರ ಕುಟುಂಬಕ್ಕೆ ನ್ಯಾಯ ದೊರೆಯುವವರೆಗೆ ನಮ್ಮ ಹೋರಾಟ, ಕಾನೂನುಬದ್ಧ ಬೆಂಬಲ ಮತ್ತು ನ್ಯಾಯಕ್ಕಾಗಿ ನಡೆಸುವ ಪ್ರಯತ್ನಗಳು ನಿರಂತರವಾಗಿರಲಿವೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಿ, ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯನ್ನು ಮತ್ತೊಮ್ಮೆ ಆಗ್ರಹಿಸಲಾಯಿತು.

## ಸಾಹಿತ್ಯ ಸಿಂಚನ

### ಮಳೆಯ ಹನಿಗಳ

ಆಕಾಶದ ಅಂಗಳದಲ್ಲಿ ಮೋಡಗಳು ಸೇರಿ,
ಮಳೆಯ ಹನಿಗಳಾಗಿ ಭುವಿಗೆ ಬಂದವು ಧಾರೆ ಸುರಿಸಿ.

ಮಣ್ಣಿನ ಕಂಪನ್ನು ಎಬ್ಬಿಸಿ ಮೃದುವಾಗಿ,
ಹಸಿರಿನ ಕನಸಿಗೆ ಜೀವ ತುಂಬಿದವು ಸೊಗಸಾಗಿ.

ಮನೆಯ ಮೇಲ್ಛಾವಣಿಯ ಮೇಲೆ ಟಪಟಪ ನಾದ,
ಮಳೆಯ ಹನಿಗಳದ್ದೇ ಮಧುರವಾದ ಗಾನ.

ಮರದ ಎಲೆಗಳ ಮೇಲೆ ಮುತ್ತಾಗಿ ಕುಳಿತು,
ಹೂವಿನ ಮೊಗದಲಿ ನಗುವಾಗಿ ಅರಳಿತು.

ಬತ್ತಿದ ನೆಲದ ಮೇಲೆ ತಂಪಾಗಿ ಹರಿದು,
ಹೊಸ ಬದುಕಿನ ಬೀಜಗಳಿಗೆ ಚೈತನ್ಯ ತುಂಬಿತು.

ರೈತನ ಕಣ್ಣಲ್ಲಿ ಭರವಸೆಯ ಬೆಳಕು,
ಹೊಲದ ತುಂಬ ಹಸಿರಿನ ಸುಂದರ ಹೊನಲು.

ಕೆರೆ-ಕಟ್ಟೆಗಳು ತುಂಬಿ ನಲಿಯುವಾಗ,
ಹಕ್ಕಿಗಳ ಹಾಡು ಮೊಳಗುವುದು ಬೆಳಗಾಗ.

ಮಕ್ಕಳ ಮನದಲ್ಲಿ ಸಂತಸದ ಅಲೆ,
ಮಳೆಯಲಿ ನೆನೆಯುವ ಆಸೆಯೇ ಬೇರೆ.

ಕಿಟಕಿಯ ಬಳಿಯಲ್ಲಿ ಕುಳಿತು ನೋಡುವಾಗ,
ಹನಿಗಳ ನೃತ್ಯ ಮನಸಿಗೆ ಹಬ್ಬವಾಗ.

ಮಳೆಯ ಹನಿಗಳೇ ಪ್ರಕೃತಿಯ ವರ,
ನಿಮ್ಮ ಸ್ಪರ್ಶದಿಂದ ಅರಳುವುದು ಜೀವಧರ.

ಬಿಸಿಲಿನ ಬೇಗೆಯನು ದೂರ ಮಾಡಿ,
ಭೂಮಿಯ ಮಡಿಲಿಗೆ ತಂಪನು ತುಂಬಿ,

ಪ್ರತಿ ಹನಿಯಲ್ಲೂ ಅಡಗಿದೆ ಜೀವದ ಕಥೆ,
ಮಳೆಯ ಹನಿಗಳೇ ಪ್ರಕೃತಿಯ ಅಮೂಲ್ಯ ಗೀತೆ.

## ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಚೆಲ್ಲಾಟ ನಿಲ್ಲಲಿ: ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ SDPI ಆಗ್ರಹ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ವಿವಿಧ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರದ ಗುಣಮಟ್ಟ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಎಸ್‌ಡಿಪಿಐ ಸಿಂಧನೂರು ಘಟಕ ಆರೋಪಿಸಿದೆ.**

ಐದು ದಿನಗಳ ಹಿಂದೆ ಮುರಾರ್ಜಿ ವಸತಿ ನಿಲಯದಲ್ಲಿ 21 ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಸಂದರ್ಭದಲ್ಲಿ ಎಸ್‌ಡಿಪಿಐ ನಿಯೋಗ ಆಸ್ಪತ್ರೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿತ್ತು. ಬಳಿಕ ಶಾಸಕ ಹಂಪನಗೌಡ ಬಾದರ್ಲಿ ಅವರು ಕ್ಷೇತ್ರದ ಎಲ್ಲಾ




ವಸತಿ ನಿಲಯಗಳ ಅಧಿಕಾರಿಗಳ ಸಭೆ ನಡೆಸಿ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಪೌಷ್ಟಿಕ ಆಹಾರ ಒದಗಿಸುವಂತೆ ಸೂಚನೆ ನೀಡಿದ್ದರು. ಅಲ್ಲದೆ, ಖುದ್ದಾಗಿ ವಸತಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಊಟ ಮಾಡಿದ್ದರು.

ಇದೇ ವೇಳೆ ಎಸ್‌ಡಿಪಿಐ ಮುಖಂಡರು ರಾಯಚೂರಿನ ಜಿಲ್ಲಾಧಿಕಾ-ರಿಗಳನ್ನು ಭೇಟಿ ಮಾಡಿ, ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪೌಷ್ಟಿಕ ಆಹಾರ ಒದಗಿಸುವಂತೆ ಮನವಿ ಸಲ್ಲಿಸಿದ್ದರು. ಆದರೆ, ಕೆಲವೇ ಗಂಟೆಗಳಲ್ಲಿ ಅಂಬೇಡ್ಕರ್ ವಸತಿ ನಿಲಯದಲ್ಲಿ 13 ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಸುದ್ದಿ ಬೆಳಕಿಗೆ ಬಂದಿದ್ದು, ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ ಎಂದು ಎಸ್‌ಡಿಪಿಐ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಕೇವಲ ವಾರ್ಡನ್‌ರನ್ನು ಅಮಾನತುಗೊಳಿಸುವುದ-ರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ವಸತಿ ನಿಲಯಗಳಿಗೆ ಸರಬರಾಜಾಗುವ ಅಕ್ಕಿ, ಬೇಳೆ ಹಾಗೂ ಇತರ ಆಹಾರ ಪದಾಥ-ರ್ಗಗಳ ಗುಣಮಟ್ಟದ ಕುರಿತು ಸಮಗ್ರ ತನಿಖೆ ನಡೆಸಬೇಕು. ವಿದ್ಯಾರ್ಥಿಗಳ ಆರೋಗ್ಯ ಮತ್ತು ಜೀವದೊಂದಿಗೆ ನಿರ್ಲಕ್ಷ್ಯ ತೋರಿದ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಎಸ್‌ಡಿಪಿಐ ಸಿಂಧನೂರು ನಿಯೋಗ ಆಗ್ರಹಿಸಿದೆ.

## ದಡೆಸುಗೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಯಶಸ್ವಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಜ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾ-ರಿಗಳ ಕಾರ್ಯಾಲಯ ಸಿಂಧನೂರ್ ಪ್ರಾಥ-'ಮಿಕ ಆರೋಗ್ಯ ಇಂದು ಮಕ್ಕಳ ಆರೋಗ್ಯದ ತಪಾಷಣೆ ಜೊತೆಗೆ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಸದರಿ ಕಾರ್ಯಕ್ರಮದಲ್ಲಿ ಡಾ. ಆಂಜನೇಯ ಆಡಳಿತ ವೈದ್ಯಾಧಿಕಾರಿಗಳು ದಡೆಸುಗುರ್ ಇವರು ಮಾತನಾಡಿ ಮಕ್ಕಳ ಆರೋಗ್ಯದಲ್ಲಿ ಅಸ್ವಸ್ತತೆ ಕಂಡು ಬಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದು ಚಿಕಿತ್ಸೆ ಪಡೆಯಬೇಕು ಕುದಿಸಿ ಆರಿಸಿ.**

ನೀರು ಕುಡಿಯಬೇಕು ಬಿಸಿಯಾದ ಆಹಾರ ಸೇವನೆ ಮಾಡಬೇಕು ವೈಯಕ್ತಿಕ ಸ್ವಚ್ಛತೆಯ ಗಮನ ಹರಿಸಿಬೇಕು ಬೀದಿ ಬದಿಯ ಆಹಾರವನ್ನು ಸೇವನೆ ಮಾಡಬಾರದು ಕತ್ತ-ರಿಸಿದ ಹಣ್ಣುಗಳನ್ನು ಸೇವನೆ ಮಾಡಬಾರದು ಶೌಚಾಲಯ ಬಳಸಬೇಕು ಕೈಕಾಲುಗಳನ್ನು ತೊಳೆದು ಕೊಳ್ಳಬೇಕು ಸ್ವಚ್ಛತೆಯಾಗಿ




ಕಾಪಾಡಿಕೊಳ್ಳಬೇಕು ಅಡುಗೆ ತಯಾರಿಕ-ರಿಗೆ ಮತ್ತು ಸಹಾಯಕಿಯರಿಗೆ ತಲೆಯ ಕ್ಯಾಪುಗಳನ್ನು, ಎಪ್ರನ್ ಬಳಸಲು ಸಲಹೆ ನೀಡಿದರು ಆಹಾರ ಪದಾರ್ಥಗಳ ಪರಿಶೀಲಿಸಿದರು ನಂತರ ವಿದ್ಯಾರ್ಥಿನಿಯರಿಗೆ ಆರೋಗ್ಯ ತಪಾಸಣೆ ಮಾಡಿದರು ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾ-ರಿಗಳು ಮಾತನಾಡಿ ಸ್ತನ್ಯಪಾನ ಸಪ್ತಾಹದ ಮಹತ್ವ ಪ್ರತಿಯೊಬ್ಬರೂ ಎದೆಹಾಲಿನ ಮಹತ್ವ ಕುರಿತು ತಾಯಂದಿರಿಗೆ ತೀಳಿಸಲಾಯಿತು,

ಮಗು ಹುಟ್ಟಿದ ಅರ್ಧ ಗಂಟೆಯೊಳಗೆ ಹಾಲು ಉಣಿಸಬೇಕು ತಾಯಿಯ ಎದೆಹಾಲು ಅಮೃತಕ್ಕೆ ಸಮಾನ ಸ್ತನ್ಯಪಾನದ ಸಮಯವನ್ನು ನಿಮ್ಮ ಶಿಶು ನಿರ್ಧರಿಸಲಿ ಬೆಳೆಯುತ್ತಿರುವ ಮಗುವಿಗೆ ಯಾವ ಸಮಯದಲ್ಲಿ ಹಾಗೂ ಎಷ್ಟು ಆಹಾರ ಬೇಕು ಎಂದು ಗೊತ್ತಾಗುತ್ತದೆ ಘೋಷವಾಕ್ಯ " ಸುಸ್ಥಿರ ಜೀವನದ ಭದ್ರ ಅಡಿಪಾಯಕ್ಕಾಗಿ ಸ್ತನ್ಯಪಾನ ಪರಿಣಾಮಕಾರಿ ವಿಧಾನಗಳನ್ನು ಸದೃಢಗೊಳಿಸೋಣ" ಜೊತೆಗೆ ತಾಯಂದಿರಿಗೆ ನಾನು ಯಾವಾಗ ಮತ್ತು ಏಕೆ ಎದೆ ಹಾಲು ಉಣಿಸಬೇಕು ಮಗುವಿಗೆ ಎದೆ ಹಾಲು ಕುಡಿಸುವ ತಾಯಂದಿರಿಗೆ ಆಗುವ ಪ್ರಯೋಜನಗಳ ಬಗ್ಗೆ ಕಿನ್ನತೆ ಕಡಿಮೆಯಾಗುವುದು ರಕ್ತಸ್ರಾವ ಕಡಿಮೆಯಾಗುವುದು ಗರ್ಭಕೋಶ ಕುಗ್ಗುವುದು ಸ್ತನ ಹಾಗೂ ಅಂಡಾಶದ ಕ್ಯಾನ್ಸರ್ ಅಪಾಯ ಕಡಿಮೆ ಮಾಡುವುದು ಸ್ತನ್ಯಪಾನ ರಕ್ಷಣೆ - ಎಲ್ಲರ ಪಾಲಿನ ಜವಾಬ್ದಾರಿ ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ಅನಿಸ್ ಫಾತಿಮಾ ಮೇಲ್ವಿಚಾರಕರು , ಸುನಿತಾ ಪಾಟೀಲ್ ಪಿಹೆಚ್ ಸಿ ಓ, ಕಿತ್ತೂರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ಸಹ ಶಿಕ್ಷಕರು ವಿದ್ಯಾರ್ಥಿನಿಯರು ಎಲ್ಲಾ ಅಂಗನವಾಡಿ ಕಾರ್ಯಕರ್ತರು ಆಶಾ ಕಾರ್ಯಕರ್ತರು ಅಂಗನವಾಡಿ ಸಹಾಯಕರು ಗರ್ಭಿಣಿ ಮಹಿಳೆಯರು ತಾಯಂದಿರು ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

## ಮುಂಗಾರು ಬೆಳೆ ಬೆಳೆಯಲು ನೀರು ಕೊಡಿ, ಇಲ್ಲವಾದಲ್ಲಿ ಆ.11ರಂದು ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಕಛೇರಿಗೆ ಮುತ್ತಿಗೆ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ: ಈಗಾಗಲೇ ತುಂಗಭದ್ರಾ ಜಲಾಶಯದಲ್ಲಿ ಸುಮಾರು 70 ಟಿಎಂಸಿಯಷ್ಟು ನೀರು ಸಂಗ್ರಹವಾಗಿದ್ದು, ಕೂಡಲೇ ಜಲಾಶಯದ ಬಲಭಾಗದ ಎಲ್‌ಎಲ್‌ಸಿ, ವಿಜಯನಗರ ಕಾಲುವೆಗಳಿಗೆ ಮತ್ತು ನದಿಗೆ ನೀರು ಹರಿಸುವ ಮೂಲಕ ರೈತರು ಮುಂಗಾರು ಹಂಗಾಮಿನ ಬೆಳೆ ಬೆಳೆಯಲು ಅನುವು ಮಾಡಿಕೊಡಬೇಕು. ಇಲ್ಲವಾದಲ್ಲಿ ಆ.11ರ ಮಂಗಳವಾರದಂದು ಮುನಿರಾಬಾದ್‌ನ ನೀರಾವರಿ ಸಲಹಾ ಸಮಿತಿಯ ಮುಖ್ಯ ಕೇಂದ್ರ ಕಛೇರಿ(ಐಸಿಸಿ)ಗೆ ಮುತ್ತಿಗೆ ಹಾಕಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ.ಗೌಡ ತಿಳಿಸಿದರು.**



ಅವರು ಶುಕ್ರವಾರ ಪಟ್ಟಣದ ಸಾಂಗಾತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ರೈತರ ಸಂಘಟನಾ ಸಭೆಯಲ್ಲಿ ಮಾತನಾಡಿ, ತುಂಗಭದ್ರಾ ಜಲಾಶಯವು ರೈತರ ಜೀವನಾಡಿದೆ. ಆದರೆ, ಪ್ರಸ್ತುತವಾಗಿ ಜಲಾಶಯದಲ್ಲಿ ನೀರಿದ್ದರೂ ಸಹ ರೈತರಿಗೆ ನೀಡುತ್ತಿಲ್ಲ. ಈಗಾಗಲೇ ಸಾಕಷ್ಟು ರೈತರು ಸಸಿ ಮಡಿಗಳನ್ನು ಹಾಕಿಕೊಂಡು, ದಿವಸಗಳು ಮುಗಿಸಿ, ಮಡಿಗಳನ್ನು ನಾಶ ಮಾಡಿದ್ದಾರೆ. ರೈತರು ಗೋಳು ಕೇಳುವವರು ಇಲ್ಲದಂತಾಗಿದೆ. ಆ.7ರ ಒಳಗಾಗಿ ಐಸಿಸಿ ಸಭೆ ಕರೆದು, ಬೆಳೆ ಬೆಳೆಯಲು ರೈತರಿಗೆ ನೀರು ಒದಗಿಸಬೇಕೆಂದು ಮನವಿ ಮಾಡಿದ್ದೇವು. ಆದರೆ, ಇದುವರೆಗೂ ಸರ್ಕಾರ, ಅಧಿಕಾ-ರಿಗಳು, ನೀರಾವರಿ ಸಲಹಾ ಸಮಿತಿಯವರಾಗಲಿ ಐಸಿಸಿ ಸಭೆ ಕರೆದಿಲ್ಲ. ಇದರಿಂದ ಗೊತ್ತಾಗುತ್ತದೆ ಇವರಿಗೆ ರೈತರ ಹಿತಬೇಕಾಗಿಲ್ಲ ಎಂಬುವುದು. ಆದ್ದರಿಂದ ಕಂಪ್ಲಿಯಲ್ಲಿ ತುರ್ತಾಗಿ ರೈತರ ಸಭೆ ಕರೆದು, ಆ.11ರಂದು ಮುತ್ತಿಗೆ ಹಾಕಲು ತೀರ್ಮಾನ ಕೈಗೊಳ್ಳಲಾಗಿದೆ. ಅಂದಿನ ದಿನದಂದು ಕಂಪ್ಲಿಯ ಸಾಂಗಾತ್ರಯ ಸಂಸ್ಕೃತ ಪಾಠಶಾಲೆಯಿಂದ ಹೋರಾಟ ಆರಂಭಿಸಿ, ಬೈಕ್ ರ?ಯಾಲಿ ಮೂಲಕ ಮುನಿರಾಬಾದ್‌ನ ತುಂಗಭದ್ರ ನೀರಾವರಿ ಕಛೇರಿಗೆ ತೆರಳಿ, ಮುತ್ತಿಗೆ ಹಾಕಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿ, ರೈತರ ಒಗ್ಗಟ್ಟಿನ ಪ್ರದರ್ಶನದೊಂದಿಗೆ ಸರ್ಕಾರಕ್ಕೆ ಎಚ್ಚರಿಕೆ ನೋಡೋಣ ಎಂದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ವಿ.ವಿರೇಶ, ನಗರ ಘಟಕ ಅಧ್ಯಕ್ಷ ತಿಮ್ಮಪ್ಪ ನಾಯಕ, ರೈತ ಮುಖಂಡರಾದ ಇಟಗಿ ಶರಣಗೌಡ, ಕೊಟ್ಟೂರು ರಮೇಶ, ಕಾಗಿ ಈರಣ್ಣ, ರವಿಚಂದ್ರ, ವೆಂಕಟ-ರಮಣ, ಪ್ರಕಾಶ, ಶಿವಜಾತ, ನಾಗರಾಜ ಸೇರಿದಂತೆ ರೈತರಿದ್ದರು.

## ಲೊಯೋಲಾ ಕಾಲೇಜಿನಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಅಭಿಯಾನ ಚಿಕಿತ್ಸೆ ಪಡೆಯುವುದು ದೌರ್ಬಲ್ಯವಲ್ಲ, ಧೈರ್ಯದ ಸಂಕೇತ - ಫಾ. ವಿನೋದ್ ಪೌಲ್




**ನೈಜ್ಯ ದೆಸೆ ನ್ಯೂಸ್**

**ಮಾನವಿ: ಲೊಯೋಲಾ ಪದವಿ ಪೂರ್ವ ಕಾಲೇಜಿನಲ್ಲಿ ಸಂವಾದ ಸಂಸ್ಥೆಯ ವತಿಯಿಂದ ಯುವಜನರಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ 'ಹೇಗಿದ್ದೀರಾ' ಎಂಬ ಕಿರು ನಾಟಕವನ್ನು ಪ್ರದರ್ಶಿಸಲಾಯಿತು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಫಾ. ವಿನೋದ್ ಪೌಲ್, ಮಾನಸಿಕ ಆರೋಗ್ಯಕ್ಕೂ ದೈಹಿಕ ಆರೋಗ್ಯದಷ್ಟೇ ಮಹತ್ವವಿದ್ದು, ಪ್ರತಿಯೊಬ್ಬರೂ ಅದಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು. ಅಗತ್ಯವಿದ್ದಾಗ ಕೌನ್ಸಿಲಿಂಗ್ ಹಾಗೂ ಚಿಕಿತ್ಸೆಯನ್ನು ಪಡೆಯಲು ಹಿಂಜರಿಯಬಾರದು. ಮಾನಸಿಕ ಆರೋಗ್ಯಕ್ಕಾಗಿ ಚಿಕಿತ್ಸೆ ಪಡೆಯುವುದನ್ನು ಹುಚ್ಚುತನ ಎಂದು ಭಾವಿಸದೆ, ಅದು ಸಮಸ್ಯೆಯನ್ನು ಧೈರ್ಯದಿಂದ ಎದುರಿಸುವ ಸಂಕೇತ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಯುವಜನರಲ್ಲಿ ಮಾನಸಿಕ ಒತ್ತಡ, ಖಿನ್ನತೆ ಹಾಗೂ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಈ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಸಂವಾದ ಸಂಸ್ಥೆಯು ರಾಜ್ಯಮಟ್ಟದ ಯುವ ಅಭಿಯಾನವನ್ನು ಹಮ್ಮಿಕೊಂಡಿದೆ. ಅದರ ಭಾಗವಾಗಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 'ಹೇಗಿದ್ದೀರಾ' ಕಿರು ನಾಟಕವನ್ನು ಪ್ರದರ್ಶಿಸಿ, ಯುವಜನರಲ್ಲಿ ಆತ್ಮವಿಶ್ವಾಸ ಬೆಳೆಸುವ ಹಾಗೂ ಮಾನಸಿಕ ಆರೋಗ್ಯದ ಮಹತ್ವವನ್ನು ತಿಳಿಸುವ ಕಾರ್ಯವನ್ನು ನಡೆಸುತ್ತಿದೆ.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಖಾಸಿಂ ಸಾಬ್ ಹಾಗೂ ಸಂವಾದ ಸಂಸ್ಥೆಯ ಯೂತ್ ಮೆಂಟ-ರ್ ಸಂಜೀವ್ ಜಗ್ಗಿ ಉಪಸ್ಥಿತರಿದ್ದರು. ನಾಟಕದಲ್ಲಿ ನಂದಿನಿ, ಅಜೀಮ್, ಮನೋಜ್, ನಾಗರಾಜ್, ಕೃಪಾ, ಗಗನ, ಷಣ್ಮುಖ, ಪೂಜಾ, ಅಂಕಿತ, ದೇವಿಕಾ, ಸ್ವಾಮಿ ಹಾಗೂ ಈಶ್ವರ್ ಅವರು ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

## ಮಸ್ಕಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ಸುದ್ದಿಗೋಷ್ಠಿ

### ರಸಗೊಬ್ಬರ ದರ ಏರಿಕೆ,ಖಾಸಗೀಕರಣ, ಕೃಷಿ ನೀತಿ ವಿರೋಧಿಸಿ ಆಗಸ್ಟ್.10ರಂದು ರೈತ-ಕಾರ್ಮಿಕರ 'ಜೈಲ್ ಭರೋ' ಹೋರಾಟ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸಿ ಆಗಸ್ಟ್ 10ರಂದು ಜಿಲ್ಲಾ ಕೇಂದ್ರದಲ್ಲಿ ರೈತ ಹಾಗೂ ಕಾರ್ಮಿಕ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ 'ಜೈಲ್ ಭರೋ' ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಬಸವಂತರಾಯಪ್ಪಗೌಡ ತಿಳಿಸಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಪೊರೇಟ್ ಕಂಪನಿಗಳು ಬ್ರಿಟಿಷ್ ನೀತಿಗಳನ್ನು ಅನುಸರಿಸುತ್ತೇವೆ. ದೇಶದಿಂದ ಕಾರ್ಪೊರೇಟ-ರ್ ಸಂಸ್ಥೆಗಳನ್ನು ತೊಲಗಿಸಲು ಎಲ್ಲರೂ ಒಟ್ಟಾಗಿ ನಿಲ್ಲಬೇಕಾಗಿದೆ. ರಾಜ್ಯದಲ್ಲಿ ಸರ್ಕಾರ ನಿಗದಿಪಡಿಸಿದ




ದರದಲ್ಲಿ ರಸಗೊಬ್ಬರ ಮಾರಾಟ ಮಾಡದೇ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆರೋಪಿಸಿದರು. ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತಂದು ಕಾರ್ಮಿಕರ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಯುತ್ತಿದೆ.

ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಬದಲು ಅತಿಥಿ ಶಿಕ್ಷಕರ ನೇಮಕ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಖಾಸಗೀಕರಣಕ್ಕೆ ಸರ್ಕಾರ ಮುಂದಾಗಿರುವುದು ಖಂಡನೀಯ ಎಂದು ಹೇಳಿದರು. ನೀಟ್ ಪರೀಕ್ಷೆ ವಿರುದ್ಧ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಪ್ರಕರಣ ದಾಖಲಿಸಿರುವ ಕ್ರಮವನ್ನು ಖಂಡಿಸಿದರು. ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿನಲ್ಲಿದ್ದು, ಕೇಂದ್ರ ಸರ್ಕಾರದ ಕೃಷಿ ನೀತಿಗಳು ಹಾಗೂ ವ್ಯಾಪಾರ ಒಪ್ಪಂದಗಳು ಕಾರ್ಪೊರೇಟ್ ಮತ್ತು ವಿದೇಶಿ ಕಂಪನಿಗಳಿಗೆ ಅನುಕೂಲವಾಗುತ್ತಿವೆ. ಕೃಷಿ ವ್ಯಾಪಾರ ಒಪ್ಪಂದಗಳನ್ನು ರದ್ದುಪಡಿಸಿ ರೈತ ಪರ ನೀತಿಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ತಾಲೂಕು ಅಧ್ಯಕ್ಷ ಹನುಮಂತಪ್ಪ ಬಲದಂಡೆ ಮಾತನಾಡಿ, ಮಸ್ಕಿ ತಾಲೂಕಿನ 5ಎ ನಾಲೆ ಕಾಮಗಾ-ರಿಯನ್ನು ಕೂಡಲೇ ಆರಂಭಿಸಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷೆ ಖಾದರಭೀ, ಕ-ರಿಯಪ್ಪ ತಲೆಖಾನ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಪಿಒಪಿ ಗಣೇಶ ಮೂರ್ತಿಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ:

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಮುಂಬರುವ ಶ್ರೀ ಗಣೇಶ ಚತುರ್ಥಿ ಹಬ್ಬವನ್ನು ಶಾಂತಿಯುತ, ಸುರಕ್ಷಿತ ಹಾಗೂ ಪರಿಸರ ಸ್ನೇಹಿಯಾಗಿ ಆಚರಿಸುವ ಉದ್ದೇಶದಿಂದ ದಿನಾಂಕ 06/08/2026 ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗಣೇಶ್ ಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾ-ರಿಗಳ ಸಭೆ ನಡೆಯಿತು.**

ಸಭೆಯಲ್ಲಿ ಪಿಒಪಿ **(Plaster of Paris)** ಗಣೇಶ ಮೂರ್ತಿಗಳ ಬಳಕೆಯಿಂದ ಜಲಮೂಲಗಳು, ಪರಿಸರ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾ-




ರಿಯಾಗಿದ್ದು, ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳ ಬಳಕೆಗೆ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಗಣೇಶ ಮೂರ್ತಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಸಂಬಂಧಿತ ಇಲಾಖೆಗಳು ಹೊರಡಿಸಿರುವ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಲಾಯಿತು.

ಪಿಒಪಿ ಮೂರ್ತಿಗಳ ಮಾರಾಟ ಮತ್ತು ಬಳಕೆಯನ್ನು ತಡೆಯಲು ಸಂಬಂಧಿಸಿದ ಇಲಾಖೆಗಳು ಜಂಟಿಯಾಗಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಯಿತು. ಗಣೇಶೋತ್ಸವದ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಮೆರವಣಿಗೆ ಮಾರ್ಗಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸುವುದು, ಸಂಚಾರ ದಟ್ಟಣೆ ನಿಯಂತ್ರಣ, ಅಗ್ನಿಶಾಮಕ ಮತ್ತು ತುರ್ತು ವೈದ್ಯಕೀಯ ಸೇವೆಗಳ ಸಿದ್ಧತೆ, ವಿದ್ಯುತ್ ಸುರಕ್ಷತೆ ಹಾಗೂ ವಿಸರ್ಜನಾ ಸ್ಥಳಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಅಲ್ಲದೆ, ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಶಾಲಾ-ಕಾಲೇಜುಗಳು, ಗಣೇಶೋತ್ಸವ ಸಮಿತಿಗಳು ಹಾಗೂ ಸ್ವಯಂಸೇವಾ ಸಂಘಟನೆಗಳ ಸಹಭಾಗಿ-ತ್ವದಲ್ಲಿ ಪರಿಸರ ಸ್ನೇಹಿ ಗಣೇಶೋತ್ಸವದ ಕು-ರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಚರ್ಚಿಸಲಾಯಿತು. ಗಣೇಶೋತ್ಸವದ ಆಚರಣೆಯಲ್ಲಿ ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಿ, ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳನ್ನು ಬಳಸಿ, ಶಾಂತಿ, ಸೌಹಾರ್ದತೆ ಹಾಗೂ ಸಾಮಾಜಿ-ಕ ಹೊಣೆಗಾರಿಕೆಯಿಂದ ಹಬ್ಬವನ್ನು ಆಚ-ರಿಸುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ಗಣೇಶ್ ಸಮಿತಿಯ ಸದಸ್ಯರು, ಪೊಲೀಸ್ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಗರಸಭೆ, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಧಿಸೂಚನೆ ಹುದ್ದೆಗಳು:

ಫಾರ್ಮಸಿ ಅಸಿಸ್ಟೆಂಟ್ – 98 ಹುದ್ದೆಗಳು
ನರ್ಸಿಂಗ್ ಅಸಿಸ್ಟೆಂಟ್ (ಪ್ರಸೂತಿ ಪರಿಚಾರಿಕಾ) ? 90 ಹುದ್ದೆಗಳು
ಒಟ್ಟು: 188 ಹುದ್ದೆಗಳು

ಅರ್ಹತೆ:
ಫಾರ್ಮಸಿ ಅಸಿಸ್ಟೆಂಟ್: ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ Diploma in Pharmacy (D.Pharm) ಪೂರ್ಣಗೊಳಿಸಿರಬೇಕು ಹಾಗೂ Karnataka Pharmacy Council ನಲ್ಲಿ ನೋಂದಣಿ ಹೊಂದಿರಬೇಕು.
ನರ್ಸಿಂಗ್ ಅಸಿಸ್ಟೆಂಟ್: ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ General Nursing Diploma ಹೊಂದಿದ್ದು, Karnataka Nursing Council ನಲ್ಲಿ ನೋಂದಣಿ ಹೊಂದಿರಬೇಕು.

ಸಂಬಳ ಶ್ರೇಣಿ:
ಫಾರ್ಮಸಿ ಅಸಿಸ್ಟೆಂಟ್: ?44,425?83,700
ನರ್ಸಿಂಗ್ ಅಸಿಸ್ಟೆಂಟ್: ?54,175?99,400

ಅರ್ಜಿ ಸಲ್ಲಿಕೆ:
ಅರ್ಜಿಯನ್ನು ಆನ್‌ಲೈನ್ ಮೂಲಕ ಏಇಂ ವೆಬ್‌ಸೈಟ್ ಮೂಲಕ ಸಲ್ಲಿಸಬೇಕು.
ನೇಮಕಾತಿ ಕರ್ನಾಟಕ ಸರ್ಕಾರದ ಹುದ್ದೆಗಳ ಮೀಸಲಾತಿ ನಿಯಮಗಳ ಪ್ರಕಾರ ನಡೆಯಲಿದೆ.

ಆನ್‌ಲೈನ್ ಅರ್ಜಿ ಸಲ್ಲಿಸಲು ವೇಳಾಪಟ್ಟಿ
ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ 07.08.2026
ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30.08.2026
ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ 31.08.2026

## ಇಂದು ವಿದ್ಯುತ್ ವ್ಯತ್ಯಯ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ :ಕಾರ್ಯ ಮತ್ತು ಪಾಲನೆ ಉಪ-ವಿಭಾಗ, ವ್ಯಾಪ್ತಿಯ 110/11 ಕೆ.ವಿ ತಾಳಿಕೋಟೆ ಉಪ-ಕೇಂದ್ರದಲ್ಲಿ ಮತ್ತೊಂದು ಪರಿವರ್ತಕ ಅಳವಡಿಸುವ ಕಾರ್ಯವನ್ನು ಮಾಡಬೇಕಾಗಿರುವುದ-ರಿಂದ ಇಂದು ಆ. 08 ರಂದು ಬೆಳಿಗ್ಗೆ 10:00 ಘಂಟೆಯಿಂದ ಮದ್ಯಾಹ್ನ 02:00 ಘಂಟೆಯವರೆಗೆ, ತಾಳಿಕೋಟೆ ಪಟ್ಟಣ, ಮಿಣಜಗಿ, ಮುಕಿಹಾಳ, ಶಿವಪುರ, ಗರಗುಂಡ, ನಾಗೂರ, ಬಳಗಾನೂರ, ಹಿರೂರ, ಕೊಣ್ಣೂರ, ತುಂಬಗಿ, ಹೊಸಹಳ್ಳಿ, ಬಿಳೆಭಾವಿ, ಬಿ.ಸಾಲವಾಡಗಿ, ಮಟಕಲ್ಲ ದೇವನಹಳ್ಳಿ, ಕಾರಗನೂರ. ಬೇಲೂರ. ಶೆಳ್ಳಗಿ, ನಾವದಗಿ, ಲಕ್ಕುಂಡಿ ಗ್ರಾಮಕ್ಕೆ ಮತ್ತು ಮೂಕಿಹಾಳ ನೀರಿನ ಘಟಕ ಮತ್ತು ಮಾಳೂರ ಕುಡಿಯುವ ನೀರಿನ ಘಟಕಕ್ಕೆ ವಿದ್ಯುತ್ ಅಡಚಣೆಯಾಗುತ್ತದೆ.




ಆದ್ದರಿಂದ ತಾಳಿಕೋಟೆ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಗ್ರಾಹಕರು ಸಹಕರಿಸಬೇಕೆಂದು ಈ ಮೂಲಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಹೆಸ್ಕಾಂ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಕಜಾಪ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷರಾಗಿ ಗೊರಜಿ ನೇಮಕ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ತಾಲೂಕಿನ ಕೊಡಗನೂರ ಗ್ರಾಮದ ವಿಶ್ರಾಂತ ಮುಖ್ಯ ಗುರುಗಳು ಹಾಗೂ ಸಾಹಿತಿಗಳಾದ ಬಸವರಾಜ ಗೊರಜಿ ಇವರನ್ನು ಕನ್ನಡ ಜಾನಪದ ಸಾಹಿತ್ಯ ಪರಿಷತ್ ತಾಲೂಕ ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.



ಕನ್ನಡ ಜಾನಪದ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಡಾ.ಎಸ್ ಬಾಲಾಜಿ ಅವರು ನೇಮಕ ಆದೇಶದಲ್ಲಿ ಕನ್ನಡ ಜಾನಪದ ಪರಿಷತ್ ಕರ್ನಾಟಕ ರಾಜ್ಯಾದ್ಯಂತ ಜಾನಪದ ಕಲೆಗಳ ಕ್ಷೇತ್ರಕಾರ್ಯ, ದಾಖಲಿಕರಣ ತರಬೇತಿ ಮೂಲಕ ಜಾನಪದ ಕಲೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು ವಸ್ತು ಸಮಗ್ರಹ, ಧ್ವನಿ ಮುದ್ರಣ, ಜಾನಪದ ಕಲಾವಿದ ಮಾನ-ಸನ್ಮಾನ, ಪ್ರಶಸ್ತಿ ಪ್ರಧಾನ ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಾ ಬಂದಿದ್ದು ಇದೀಗ ತನ್ನ ಎಲ್ಲಾ ನಗರ ಕೇಂದ್ರಿತ ಜಾನಪದ ಚಟುವಟಿಕೆಗಳನ್ನು ತಾಲೂಕು, ಗ್ರಾಮ ಹಾಗೂ ಹೋಬಳಿ ಹಂತದಲ್ಲೂ ನಿರ್ವಹಿಸಲು ತೀರ್ಮಾನಿಸಿದ್ದು ಇದರ ನಿಮಿತ್ಯವಾಗಿ ಸಾಹಿತಿ ಬಸವರಾಜ ಗುರೂಜಿ ಇವರನ್ನು ಕನ್ನಡ ಜಾನಪದ ಪರಿಷತ್ತಿನ ತಾಳಿಕೋಟಿ ತಾಲೂಕಿನ ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಅವರು ಈ ದಿನದಿಂದಲೇ ತಕ್ಷಣದಿಂದ ಕಾರ್ಯ ಪ್ರವೃತ್ತರಾಗಬೇಕೆಂದು ತಿಳಿಸಿದ್ದಾರೆ.

## ಮೊರಾರ್ಜಿ ವಸತಿ ಶಾಲೆ ಪ್ರಾಂಶುಪಾಲರನ್ನು ಅಮಾನತು ಮಾಡಲು ಕರವೇ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ನಗರದ ವಳಬಳ್ಳಾರಿ ರಸ್ತೆಯಲ್ಲಿ ಬರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರನ್ನು ಅಮಾನತು ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ (ನಾರಾಯಣ ಗೌಡ ಬಣದ) ತಾಲ್ಲೂಕು ಘಟಕದ ಅಧ್ಯಕ್ಷ ಎಲ್.ರಾಜಾಸಾಬ್ ಗಾಂಧಿನಗರ ಆಗ್ರಹಿಸಿದರು.




ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕಳಪೆ ಮಟ್ಟದ ಆಹಾರವನ್ನು ನೀಡುವ ಮೂಲಕ ಕರ್ತವ್ಯ ಲೋಪ ಎಸಗಿದ್ದು, ಇದ-ರಿಂದಾಗಿ ಅನೇಕ ವಿದ್ಯಾರ್ಥಿಗಳ ಆರೋಗ್ಯದಲ್ಲಿ ಏರುಪೇರಾಗಿದೆ. ಈ ಬಗ್ಗೆ ಶಾಸಕರು, ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಸ್ವತಃ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೊನ್ನೆ ನ್ಯಾಯಾಧೀಶರು ಭೇಟಿ ನೀಡಿದಾಗಲೂ ಇದೇ ರೀತಿಯ ಕಳಪೆ ಮಟ್ಟದ ಆಹಾರವನ್ನು ನೀಡಿದ್ದು, ಬೆಳಕಿಗೆ ಬಂದಿದ್ದು, ಈ ಬಗ್ಗೆ ನ್ಯಾಯಾಧೀಶರು ಕಳವಳ ವ್ಯಕ್ತಪಡಿಸಿದ್ದಾರೆ. ಆದರೆ ಇದುವರೆಗೂ ಪ್ರಿನ್ಸಿಪಲ್ ಮೇಲೆ ಯಾವುದೇ ಕ್ರಮ ಆಗದೇ ಇರುವುದು ಅನುಮಾನ ಮೂಡಿಸಿದೆ. ಕೂಡಲೇ ಇಲ್ಲಿನ ಪ್ರಾಂಶುಪಾಲರನ್ನು ಅಮಾನತ್ತುಗೊಳಿಸಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ: ಕರವೇ ಪದಾಧಿಕಾರಿಗಳಾದ ಕಾಳಪ್ಪ ಮೇಸ್ತ್ರಿ, ಸುರೇಶ ಆರ್.ಎಕ್ಸ್, ಭಾಷುಸಾಬ್, ರವಿಕುಮಾರ ಇತರರು ಇದ್ದರು.

# ಜ್ಞಾನಜ್ಯೋತಿ ಕಾಲೇಜಿನಲ್ಲಿ ಸಾಧಕರಿಗೆ ಸನ್ಮಾನ ಮತ್ತು ಸ್ವಾಗತ ಸಮಾರಂಭ: ಪರೀಕ್ಷೆಗಾಗಿ ಓದಬೇಡಿ, ಜ್ಞಾನಕ್ಕಾಗಿ ಓದಿ – ಶಿವಾನಂದ ಮೇಟಿ ಕರೆ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರು: "ಅಧ್ಯಯನ ಎನ್ನುವುದು ಪರೀಕ್ಷೆಗಾಗಿ ಮಾಡುವ ಕಂಠಪಾಠವಾಗಬಾರದು, ಅದೊಂದು ತಪಸ್ಸಾಗಬೇಕು" ಎಂದು ಗಂಗಾವತಿಯ ಎಸ್‌ಕೆಆರ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಶಿವಾನಂದ ಮೇಟಿ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿನ ಸತ್ಯ ಗಾರ್ಡನ್ ಫಂಕ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಸೋಮರೆಡ್ಡಿ ಸ್ಮಾರಕ ಜ್ಞಾನಜ್ಯೋತಿ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಸಾಧಕರಿಗೆ ಸನ್ಮಾನ ಮತ್ತು ಸ್ವಾಗತ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ವಿಜ್ಞಾನವನ್ನು ಓದುವಾಗ ಸೃಷ್ಟಿಯ ರಹಸ್ಯವನ್ನು ತಿಳಿಯುವ ಕುತೂಹಲವಿರಬೇಕು, ಗಣಿತವನ್ನು ಬಿಡಿಸುವಾಗ ತಾರ್ಕಿಕ ಆಲೋಚನೆ ಬೆಳೆಯಬೇಕು ಮತ್ತು ಓದುವಾಗ ಸಮಾಜ ಹಾಗೂ ದೇಶದ ಆರ್ಥಿಕತೆಯನ್ನು ಅರಿಯುವ ಹಸಿವಿರಬೇಕು. ಜ್ಞಾನವನ್ನು ಅರಸಿ ಓದಿದರೆ, ಅಂಕಗಳು ತಾವಾಗಿಯೇ ನಿಮ್ಮ ಬೆನ್ನ ಹಿಂದೆ ಬರುತ್ತವೆ. ನಿಮ್ಮ ಅಧ್ಯಯನ ಕೇವಲ ಉದ್ಯೋಗ ಪಡೆಯುವ ಸಾಧನವಾಗದೆ, ನಿಮ್ಮ ವ್ಯಕ್ತಿತ್ವವನ್ನು ರೂಪಿಸುವ ಹಾಗೂ ಆಲೋಚನಾ ಶಕ್ತಿಯನ್ನು ವಿಸ್ತರಿಸುವ ಧ್ಯಾನವಾಗಲಿ. ನಿರಂತರ ಪರಿಶ್ರಮ ಮತ್ತು ನಿಮ್ಮ ಗುರಿಯ ಮೇಲಿನ ಛಲ ನಿಮ್ಮನ್ನು ಎಂದಿಗೂ ಕೈಬಿಡುವುದಿಲ್ಲ ಎಂದು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ವಿದ್ಯಾರ್ಥಿಗಳಿಗೆ ಒತ್ತಡ ಹಾಕಬೇಡಿ – ಡಾ. ಮರಿಬಸಪ್ಪ: ಮುಖ್ಯ ಭಾಷಣ ಹಾಗೂ ವಿಶೇಷ ಉಪನ್ಯಾಸ ನೀಡಿದ ಕುವೈತ್ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಮರಿಬಸಪ್ಪ ಕರ್ಚೇಡ್ ಅವರು ಮಾತನಾಡಿ, ಪಾಲಕರು ಮಕ್ಕಳಿಗೆ ಓದಿನ ವಿಷಯದಲ್ಲಿ ಅತಿಯಾದ ಒತ್ತಡ ಹೇರಬಾರದು, ಬದಲಿಗೆ ಅವರಿಗೆ ಸೂಕ್ತವಾಗಿ ಸಹಕರಿಸಬೇಕು ಎಂದು ತಿಳಿಸುತ್ತಾ, ಸಂಶೋಧನಾತ್ಮಕ ಬೆಳವಣಿಗೆಯ ಕುರಿತು ವಿದ್ಯಾರ್ಥಿಗಳಿಗೆ ವಿಸ್ತಾರವಾಗಿ ವಿವರಿಸಿದರು.

ಕಾಲೇಜಿನ ಪ್ರಗತಿ ಮತ್ತು ವಿದ್ಯಾರ್ಥಿಗಳ ಸಾಧನೆ ಅನಾವರಣ: ಕಾರ್ಯಕ್ರಮದ ಆರಂಭದಲ್ಲಿ ಹುಬ್ಬಳ್ಳಿಯ ಪಿಸಿ ಜಾಬಿನ್ ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕರಾದ ಡಾ. ಹನುಮನಗೌಡ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ವೇಳೆ ಅವರು ಕಾಲೇಜಿನ ಶೈಕ್ಷಣಿಕ ಹಿನ್ನೆಲೆ, ಕಾಲೇಜು ಬೆಳೆದು ಬಂದ ಹಾದಿ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯದ ಕುರಿತು ಸವಿಸ್ತಾರವಾಗಿ ಮಾತನಾಡಿ, ಎಲ್ಲರನ್ನೂ ಸ್ವಾಗತಿಸಿದರು. ಬಳಿಕ ಜ್ಞಾನಜ್ಯೋತಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎನ್.ಪಿ. ವಿಷ್ಣುವರ್ಧನ ರೆಡ್ಡಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಕಾಲೇಜಿನ ಶೈಕ್ಷಣಿಕ ಶಿಸ್ತು, ಸಾಧನೆಗಳು ಮತ್ತು ವಿದ್ಯಾರ್ಥಿಗಳಲ್ಲಿ ಜ್ಞಾನದ ಜೊತೆಗೆ ಉತ್ತಮ ಸಂಸ್ಕಾರವನ್ನು ಬೆಳೆಸುವ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಭೆಯ ಮುಂದೆ ಪ್ರಸ್ತುತಪಡಿಸಿದರು.

ಸಾಧಕ ವಿದ್ಯಾರ್ಥಿಗಳಿಗೆ ಗೌರವ ಮತ್ತು ಸನ್ಮಾನ: ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ (ಆುಣುಟಿಛಿಣುಂಟಿ) ಪಾಸಾದ 106 ವಿದ್ಯಾರ್ಥಿಗಳಿಗೆ ಪದಕ ನೀಡಿ ಗೌರವಿಸಲಾಯಿತು. ಬಳಿಕ ಜ್ಞಾನಜ್ಯೋತಿ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಪ್ರಸ್ತುತ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಆಗಿರುವ ಪ್ರದೀಪ್ ಕುಮಾರ್ ಸನ್ಮಾನ ಸ್ವೀಕರಿಸಿ ಮಾತನಾಡಿ, ತಾವು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಎದುರಿಸಿದ ಸಮಸ್ಯೆಗಳನ್ನು ನೆನಪಿಸಿಕೊಂಡರು. ಜೀವನದಲ್ಲಿ ಬರುವ ಕಷ್ಟಗಳು ಸಮಸ್ಯೆಗಳಲ್ಲ, ಅವು ನಮ್ಮ ಸಾಧನೆಗೆ ಪ್ರೇರಣೆಯಾಗಬೇಕು ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು. ಇದೇ ಸಂದರ್ಭದಲ್ಲಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ. ಮಲ್ಲಪ್ಪ ಸುನಗದ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜ್ಞಾನಜ್ಯೋತಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಎನ್. ಹುಚ್ಚಾರೆಡ್ಡಿ ವಹಿಸಿದ್ದರು. ಸಮಾರಂಭದ ಕೊನೆಯಲ್ಲಿ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಹಾಗೂ ಆಕರ್ಷಕ ಸಾಂಸ್ಕೃತಿ-ಕ ಕಾರ್ಯಕ್ರಮಗಳು ಜರುಗಿದವು.

# ಭೂಮಾನಂದ ಹತ್ಯೆ ಖಂಡಿಸಿ ಪ್ರತಿಭಟನೆ; ಆರೋಪಿಗಳ ಬಂಧನಕ್ಕೆ ಆಗ್ರಹ



❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ರಾಯಚೂರು ಜಿಲ್ಲೆಯ ದಲಿತ ಮುಖಂಡ ಹಾಗೂ ಸಾಮಾಜಿ-ಕ ಹೋರಾಟಗಾರ ಭೂಮಾನಂದ ಅವರ ಅಮಾನುಷ ಹತ್ಯೆಯನ್ನು ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ?ಕಾದ್ರೊಳ್ಳಿ ಬಣ) ಕೊಪ್ಪಳ ಜಿಲ್ಲಾ ಸಮಿತಿಯು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿ, ಪ್ರಕರಣದ ಸಮಗ್ರ ತನಿಖೆ ನಡೆಸಿ ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿತು.

ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಚುನಾವಣಾ ಶಾಖೆಯ ತಹಶೀಲ್ದಾರ್ ರವಿಕುಮಾರ್ ವಸ್ತ್ರದ ಅವರು ಮನವಿ ಸ್ವೀಕರಿಸಿದರು. ಭೂಮಾನಂದ ಅವರು ದಲಿತರು, ಶೋಷಿತರು ಹಾಗೂ ಹಿಂದುಳಿದ ಸಮುದಾಯಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಿದ್ದ ಸಾಮಾಜಿ-ಕ ಹೋರಾಟಗಾರರಾಗಿದ್ದು, ಅವರ ಹತ್ಯೆ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದ ಮೇಲಿನ ಗಂಭೀರ ದಾಳಿಯಾಗಿದೆ ಎಂದು ಸಂಘಟನೆ ಆಕ್ರೋಶ ವ್ಯಕ್ತಪಡಿಸಿತು.

ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಳಪಡಿಸಿ, ಹತ್ಯೆಯಲ್ಲಿ ಭಾಗಿಯಾದವರು ಹಾಗೂ ಅದರ ಹಿಂದಿರುವ ಸಂಚುಕೋರರನ್ನು ಶೀಘ್ರ ಪತ್ತೆಹಚ್ಚಿ ಬಂಧಿಸಬೇಕು. ಪ್ರಕರಣವನ್ನು ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಲಾಯಿತು. ಮೃತರ ಕುಟುಂಬಕ್ಕೆ ?50 ಲಕ್ಷ ಪರಿಹಾರ, 10 ಎಕರೆ ಭೂಮಿ ಹಾಗೂ ಕುಟುಂಬದ ಒಬ್ಬ ಸದಸ್ಯ-ರಿಗೆ ಸರ್ಕಾರಿ ಉದ್ಯೋಗ ನೀಡಬೇಕು.

ಜೊತೆಗೆ ರಾಜ್ಯದಲ್ಲಿ ದಲಿತ ಮುಖಂಡರು ಮತ್ತು ಸಾಮಾಜಿಕ ಹೋರಾಟಗಾರರಿಗೆ ಅಗತ್ಯ ಪೊಲೀಸ್ ಭದ್ರತೆ ಒದಗಿಸಿ, ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ?ಕಾದ್ರೊಳ್ಳಿ ಬಣ) ಜಿಲ್ಲಾ ಮತ್ತು ತಾಲೂಕು ಘಟಕದ ಪದಾಧಿಕಾ-ರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.ಇದನ್ನು 'ವಿಜಯ ಕರ್ನಾಟಕ', 'ಪ್ರಜಾವಾಣಿ', 'ಸಂಯುಕ್ತ ಕರ್ನಾಟಕ' ಶೈಲಿಯ ಚಿಕ್ಕ ಪತ್ರಿಕಾ ಸುದ್ದಿಯಾಗಿಯೂ ರೂಪಿಸಬಹುದು.

# ಅಂಜುಮನ್-ಎ-ಮುಸ್ಲಿಮೀನ್ ಚಿತ್ರನಾಳ ಗ್ರಾಮ ಕಮಿಟಿಯ ನೂತನ ಪದಾಧಿಕಾರಿಗಳ ಸರ್ವಾನುಮತದ ಆಯ್ಕೆ.

❑ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು: ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ(ರಿ) ವತಿಯಿಂದ ದಿನಾಂಕ: 05/08/2026 ರಂದು ಚಿತ್ರನಾಳ ಗ್ರಾಮದ ಜಾಮಿಯಾ ಮಸೀದಿಯಲ್ಲಿ ನಡೆದ ಸಭೆಯಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಚಿತ್ರನಾಳ ಗ್ರಾಮದ ಕಮಿಟಿಯ ಗೌರವ ಅಧ್ಯಕ್ಷರಾಗಿ ಸಯ್ಯದ್ ಗೌಸ್ ಖಾದ್ರಿ, ಅಧ್ಯಕ್ಷರಾಗಿ ಸಯ್ಯದ್ ಪೀರ್ ಪಾಷಾ ಖಾದ್ರಿ, ಉಪಾಧ್ಯಕ್ಷರಾಗಿ ಸಯ್ಯದ್ ಪೀರ್ ಪಾಷಾ ಖಾದ್ರಿ, ಇನ್ನೋರ್ವ ಉಪಾಧ್ಯಕ್ಷರಾಗಿ ಹುಸೇನ್ ಸಾಬ್ ಕಂಬಾರ, ಪ್ರಧಾನ ಕಾರ್ಯದರ್ಶಿಯಾಗಿ ಸಯ್ಯದ್ ಅಬ್ದುಲ್ ಹಸನ್ ಖಾದ್ರಿ, ಖಜಾಂಚಿಗಳಾಗಿ ಸಯ್ಯದ್ ಜಾನಿಪಾಶ ಖಾದ್ರಿ ಹಾಗೂ ಮದರ್ ಸಾಬ್ ಕಂಬಾರ, ಕಾರ್ಯದರ್ಶಿಗಳಾಗಿ ಸಯ್ಯದ್ ಸೈಫುಲ್ಲ ಖಾದ್ರಿ ಹಾಗೂ ಮೈಬುಸಾಬ್ ಮುಜಾವರ್ ಸದಸ್ಯರಾಗಿ ಸಯ್ಯದ್ ಅನ್ವರ್ ಪಾಷಾ ಖಾದ್ರಿ, ಸಯ್ಯದ್ ಮುಸ್ತಾಕ್ ಖಾದ್ರಿ, ಸಯ್ಯದ್ ಶಾಫಿರ್ ಖಾದ್ರಿ, ಸಯ್ಯದ್ ಸಾದಿಕ್ ಖಾದ್ರಿ, ಸಯ್ಯದ್ ಅಹ್ಮದ್ ಖಾದ್ರಿ, ಸಯ್ಯದ್ ಜುಬೆರ್ ಪಾಷಾ ಖಾದ್ರಿ, ಸಮೀರ್ ಕಂಬಾರ, ಹಸನ್ ಸಾಬ್ ಕಂಬಾರ, ಇಮಾಮ್ ಸಾಬ್ ಮುಜಾವರ್, ಸಯ್ಯದ್ ಪೀರ್ ಪಾಷಾ ಖಾದ್ರಿ, ಸಯ್ಯದ್ ಖಾಜಾಪಾಶ ಖಾದ್ರಿ, ರಾಜಸಾಬ್ ಕಂಬಾರ ಹಾಗೂ ಅಂಜುಮನ್ ಲಿಂಗಸೂಗೂರ ತಾಲೂಕು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಯ್ಯದ್ ಗೌಸುದ್ದಿನ್ ಖಾದ್ರಿ, ಸಯ್ಯದ್ ಸಾಬೀರ್ ಪಾಷಾ ಖಾದ್ರಿ, ಸಯ್ಯದ್ ಬಾಬಾಜಾನಿ ಖಾದ್ರಿ, ಸಯ್ಯದ್ ನೂರುಲ್ಲಾ ಖಾದ್ರಿ, ಸಯ್ಯದ್ ಹಜರತ್ ಪಾಷಾ ಖಾದ್ರಿ, ಸಯ್ಯದ್ ಹಸನ್ ಖಾದ್ರಿ, ಸಯ್ಯದ್ ಬಾಬಾಜಾನಿ, ನಬಿಸಾಬ್ ಮುಜಾವರ್,

ಪೀರ್ ಸಾಬ್ ನದಾಫ್ ಇವರನ್ನ ಚಿತ್ರನಾಳ ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಆಯ್ಕೆ ಮಾಡಲಾಯಿತು ಈ ಸಂದರ್ಭದಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ಪದಾಧಿಕಾರಿಗಳು, ಕಾರ್ಯಕಾ-ರಿಸಮಿತಿಯ ಸದಸ್ಯರು ಹಾಗೂ ನೂತನವಾಗಿ ಆಯ್ಕೆಯಾದ ಅಂಜುಮನ್-ಎ-ಮುಸ್ಲಿಮೀನ್ ಚಿತ್ರನಾಳ ಗ್ರಾಮದ ಅಂಜುಮನ್ ಕಮಿಟಿಯ ಪದಾಧಿಕಾರಿಗಳು & ಸದಸ್ಯರು ಹಾಗೂ ಸಮುದಾಯದ ಗುರು ಹಿರಿಯರು ಸಹೋದರರು ಉಪಸ್ಥಿತರಿದ್ದರು

# ಸ್ವಾತಂತ್ರ್ಯ ದಿನಾಚರಣೆ ಯಶಸ್ವಿಗೆ ಎಲ್ಲರ ಸಹಕಾರ ಅಗತ್ಯ– ತಹಸೀಲ್ದಾರ್ ಮಂಜುನಾಥ್



❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕು ಆಡಳಿತದ ವತಿಯಿಂದ ಅಗಸ್ಟ್ 15ರಂದು 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸುವ ಸಂಬಂಧ ತಹಸೀಲ್ದಾರ್ ಕಚೇರಿಯಲ್ಲಿ ಶುಕ್ರವಾರ ತಹಸೀಲ್ದಾರ್ ಮಂಜುನಾಥ್ ಭೋಗಾವತಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ತಹಸೀಲ್ದಾರ್ ಮಂಜುನಾಥ್ ಭೋಗಾವತಿ ಮಾತನಾಡಿ ಸ್ವಾತಂತ್ರ್ಯ ದಿನಾಚರಣೆ ರಾಷ್ಟ್ರೀಯ ಹಬ್ಬವಾಗಿದ್ದು, ಎಲ್ಲಾ ಸರ್ಕಾರಿ ಇಲಾಖೆಗಳು ಸಾರ್ವಜನಿಕರ ಸಹಕಾರ ಹಾಗೂ ಪರಸ್ಪರ ಸಮನ್ವಯದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಬೇಕು ಎಂದು ಸೂಚಿಸಿದರು. ತಾಲೂಕಿನ ಸರ್ಕಾರಿ ಕಚೇರಿಗಳಲ್ಲಿ ಬೆಳಗ್ಗೆ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇ-ರಿಸಿಕೊಂಡು ಎಲ್ಲಾ ಇಲಾಖೆಯ ಅಧಿಕಾರಿಗಳು ಪ್ರತಿ ವರ್ಷದಂತೆ ಈ ವರ್ಷವೂ ಸಹ ಕೇಂದ್ರ ಶಾಲೆಯ ಆವರಣದಲ್ಲಿ ಬೆಳಿಗ್ಗೆ 9 ಗಂಟೆಗೆ ನಡೆಯುವ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಧ್ವಜಾರೋಹಣ, ಸಾಂಸ್ಕೃತಿ-ಕ ಕಾರ್ಯಕ್ರಮಗಳು, ಶಾಲಾ ವಿದ್ಯಾರ್ಥಿಗಳ ಭಾಗವಹಿಸುವಿಕೆ, ಅಗತ್ಯ ಮೂಲಸೌಲಭ್ಯಗಳು ಹಾಗೂ ಕುಡಿಯುವ ನೀರು, ಸ್ವಚ್ಛತೆ, ಭದ್ರತೆ ಸೇರಿದಂತೆ ಎಲ್ಲ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ತಾಲೂಕು ಪಂಚಾಯತ್ ಇಒ ಶಿವಾನಂದರಡ್ಡಿ, ಪುರಸಭೆ, ನೀರಾವರಿ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾ-ರಿಗಳು, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಪುರಸಭೆ ಹಾಗೂ ಇತರೆ ಇಲಾಖೆಗಳ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಸಿದ್ಧತೆ ಕುರಿತು ಚರ್ಚಿಸಿದರು. ಸಭೆಯಲ್ಲಿ ಊರಿನ ಪ್ರಮುಖರು ಹಾಗೂ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

# ಲಕ್ಷ್ಮಣ ಸವದಿಗೆ ಸಚಿವಸ್ಥಾನ: ಸಂಭ್ರಮಾಚರಣೆ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಇತ್ತೀಚಿಗೆ ಅಥಣಿ ಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡಿದ ಹಿನ್ನೆಲೆಯಲ್ಲಿ ಪಟ್ಟಣದ ಗಾಣಿಗ (ಸಜ್ಜನ) ಸಮಾಜ ಹಾಗೂ ಸವದಿ ಅಭಿಮಾನಿಗಳಿಂದ ಸಂಭ್ರಮಾಚರಣೆ ಮಾಡಲಾಯಿತು. ಗುರುವಾರ ಪಟ್ಟಣದ ಶ್ರೀ ಗಾಣಸಿರಿ ವೃತ್ತದಲ್ಲಿ ಗಾಣಿಗ ಸಮಾಜದ ಮುಖಂಡರು ಹಾಗೂ ಅಭಿಮಾನಿಗಳು ಸೇರಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಚಿವ ಸವದಿ ಪರ ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಅಸ್ಕಿ ಫೌಂಡೇಶನ್ ಕೊಣ್ಣೂರ ಅಧ್ಯಕ್ಷರಾದ ಸಿ.ಬಿ.ಅಸ್ಕಿ ಅವರು ಮಾತನಾಡಿ ಸಹಕಾರಿ ರಂಗದಲ್ಲಿ ಸಾಕಷ್ಟು ಸೇವೆಯನ್ನು ಮಾಡಿದ ಗಾಣಿಗ ಸಮಾಜದ ಹಿರಿಯ, ಅನುಭವಿ ನಾಯಕರಾದ ಲಕ್ಷ್ಮಣ ಸವದಿ ಅವರಿಗೆ ಸಹಕಾರ ಹಾಗೂ ಸಕ್ಕರೆ ಖಾತೆಯ ಸಚಿವರನ್ನಾಗಿ ಮಾಡಿರುವುದರ ಜೊತೆಗೆ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿಯೂ ಮಾಡಲಾಗಿದೆ ಇದಕ್ಕಾಗಿ ನಾವು ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಅವರಿಗೆ ಸಚಿವ ಸಂಪುಟದ ಮೊದಲ ಹಂತದಲ್ಲಿಯೇ ಸ್ಥಾನ ಸಿಗಬೇಕಾಗಿತ್ತಾದರೂ ಅದು ಇದೀಗ ಸಿಕ್ಕಿದೆ, ಅವರ ಅಪಾರ ರಾಜಕೀಯ ಅನುಭವದಿಂದಾಗಿ ಸಹಕಾರ ಕ್ಷೇತ್ರ ಹಾಗೂ ಇಡೀ ರಾಜ್ಯಕ್ಕೆ ಸಾಕಷ್ಟು ಅನಕೂಲ ಆಗಲಿದೆ ಎಂದರು. ಗಾಣಿಗ ಸಮಾಜದ ಪ್ರಮುಖರಾದ ಕಾಶಿನಾಥ ಪಿ.ಸಜ್ಜನ ಅವರು ಮಾತನಾಡಿ ನಮ್ಮ ಸಮಾಜದ ಹಿರಿಯ ರಾಜಕಾರಣಿಗಳಾದ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ಕೊಟ್ಟಿರುವುದು ನಮ್ಮ ಸಮಾಜ ಹಾಗೂ ರಾಜ್ಯದ ಹಿತ ದೃಷ್ಟಿಯಿಂದ ಒಳ್ಳೆಯ ನಿರ್ಧಾರವಾಗಿದೆ. ಭಗವಂತ ಅವರಿಗೆ ಇನ್ನಷ್ಟು ಸಮೃದ್ಧಿ ಮತ್ತು ಶಕ್ತಿಯನ್ನು ಕರುಣಿಸಲಿ ಎಂಬುದು ನಮ್ಮೆಲ್ಲರ ಹಾರೈಕೆಯಾಗಿದೆ ಎಂದರು.

ಸಂಭ್ರಮಾಚರಣೆಯಲ್ಲಿ ಗಾಣಿಗ ಸಮಾಜದ ಅಧ್ಯಕ್ಷರಾದ ಪ್ರಕಾಶ ಸಜ್ಜನ, ಉಪಾಧ್ಯಕ್ಷ ತಿಪ್ಪಣ್ಣ ಸಜ್ಜನ, ಪುರಸಭೆ ಮಾಜಿ ಸದಸ್ಯರಾದ ಮುತ್ತಪ್ಪ ಚಮಲಾಪೂರ, ಪ್ರಕಾಶ ಹಜೇರಿ, ಮಾನಸಿಂಗ್ ಕೊಕಟನೂರ, ಪರಶುರಾಮ ತಂಗಡಗಿ, ರಾಜು ಸಜ್ಜನ,ಶರಣ ಸಾಹಿತ್ಯ ಪರಿಷತ್ ಯುವ ಘಟಕಾಧ್ಯಕ್ಷ ಜಗದೀಶ ಬಿಳೇಭಾವಿ, ಬಸವರಾಜ ಸಜ್ಜನ ಬ್ಯಾಲ್ಯಾಳ, ಅಶೋಕ ಸಜ್ಜನ, ಬಸವರಾಜ ಸಜ್ಜನ(ಜಾಲಿಬೆಂಚಿ), ಶಿವಕುಮಾರ ದೇಸಾಯಿ, ಮಲ್ಲಿಕಾರ್ಜುನ ಪಾಳ್ಕಿ, ಅರವಿಂದ ಸಜ್ಜನ ಇಲಕಲ್ಲ,ದತ್ತು ಉಭಾಳೆ, ಶರಣಪ್ಪ ಸಜ್ಜನ, ನಾಗರಾಜ ಸಜ್ಜನ, ಮಹೇಶ ಸರಶೆಟ್ಟಿ, ರವಿ ಸಜ್ಜನ,ಮಹಾಂತೇಶ ಸಜ್ಜನ, ಜಗದೀಶ ಸಜ್ಜನ, ಪ್ರಕಾಶ ಸಜ್ಜನ ಬಿಳವಾರ, ಚಂದ್ರಶೇಖರ ಸಜ್ಜನ, ಕೆ.ಟಿ.ಸಜ್ಜನ ಬಸವರಾಜ ಸಜ್ಜನ(ದೊಡ್ಡಮನಿ) ಹಾಗೂ ಅಪಾರ ಅಭಿಮಾನಿಗಳು ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

**BJMC**

BJMC (ಬ್ಯಾಚುಲರ್ ಆಫ್ ಜರ್ನಲಿಸಂ ಮತ್ತು ಮಾಸ್ ಕಮ್ಯುನಿಕೇಷನ್) ಎಂಬುದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ 3 ವರ್ಷಗಳ ಪದವಿ ಕೋರ್ಸ್ ಆಗಿದೆ. ಇದು ಸುದ್ದಿ ತಯಾರಿಕೆ, ಪ್ರಸಾರ, ಡಿಜಿಟಲ್ ಮಾಧ್ಯಮ, ಜಾಹೀರಾತು ಮತ್ತು ಜನಸಂಪರ್ಕವನ್ನು ಕಲಿಸುತ್ತದೆ. 2ನೇ ಪಿಯುಸಿ (10+2) ಪಾಸ್ ಮಾಡಿದವರು ಇದಕ್ಕೆ ಅರ್ಹರು. [1, 2, 3, 4]
ಪ್ರಮುಖ ಮುಖ್ಯಾಂಶಗಳು

ಕೋರ್ಸ್ ಹೆಸರು: BJMC (Bachelor of Journalism and Mass Communication)
ಅವಧಿ: 3 ವರ್ಷಗಳು (ಸೆಮಿಸ್ಟರ್ ಪದ್ಧತಿ)
ಅರ್ಹತೆ: ಯಾವುದೇ ಸ್ಟ್ರೀಮ್‌ನಲ್ಲಿ 10+2 ಅಥವಾ 2ನೇ ಪಿಯುಸಿ ಉತ್ತೀರ್ಣ
ಪ್ರಮುಖ ವಿಷಯಗಳು: ಮುದ್ರಣ ಪತ್ರಿಕೋದ್ಯಮ, ಪ್ರಸಾರ ಮಾಧ್ಯಮ, ಡಿಜಿಟಲ್ ಜರ್ನಲಿಸಂ, ಜಾಹೀರಾತು ಮತ್ತು ಪಿ.ಆರ್ (Public Relations) [1, 2, 3]

ಕಲಿಯುವ ಮುಖ್ಯ ವಿಷಯಗಳು
ಮುದ್ರಣ ಮತ್ತು ಇಲೆಕ್ಟ್ರಾನಿಕ್ ಪತ್ರಿಕೋದ್ಯಮ
ಸುದ್ದಿ ವರದಿ ಮತ್ತು ಸಂಪಾದನೆ (Reporting and Editing)
ರೇಡಿಯೋ ಮತ್ತು ಟೆಲಿವಿಷನ್ ಉತ್ಪಾದನೆ
ಡಿಜಿಟಲ್ ಮೀಡಿಯಾ ಮತ್ತು ಕಂಟೆಂಟ್ ರೈಟಿಂಗ್
ಫೋಟೋ ಜರ್ನಲಿಸಂ ಮತ್ತು ವೀಡಿಯೊಗ್ರಫಿ [1, 2, 3, 4]

ಉದ್ಯೋಗಾವಕಾಶಗಳು
ಪತ್ರಕರ್ತ ಅಥವಾ ಸುದ್ದಿ ವರದಿಗಾರ (Journalist / Reporter)
ಸುದ್ದಿ ನಿರೂಪಕ (News Anchor)
ಕಂಟೆಂಟ್ ರೈಟರ್ ಅಥವಾ ಡಿಜಿಟಲ್ ಕ್ರಿಯೇಟರ್
ರೇಡಿಯೋ ಜಾಕಿ (RJ)
ಸಾರ್ವಜನಿಕ ಸಂಪರ್ಕ ಅಧಿಕಾರಿ (PR Executive)

## ಸ್ವಾತಂತ್ರ್ಯೋತ್ಸವ ದಿನ ರಾಷ್ಟ್ರೀಯ ಹಬ್ಬ: ತಹಶೀಲ್ದಾರ್ ಅರಕೇರಿ

ನೈಜ್ಯ ದೆಸೆ ನ್ಯೂಸ್




**ತಾಳಿಕೋಟಿ: ಮುಂಬರುವ ಆಗಸ್ಟ್ 15 ರಂದು ನಡೆಯಲಿರುವ ಸ್ವಾತಂತ್ರ್ಯೋತ್ಸವವನ್ನು ಶಿಸ್ತುಬದ್ಧವಾಗಿ ಹಾಗೂ ವಿಜ್ರಂಭಣೆಯಿಂದ ಆಚರಿಸುವ ಸಂಬಂಧ ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ಪೂರ್ವಭಾವಿ ಸಭೆ ನಡೆಯಿತು.**

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಭಾರಿ ತಹಸಿಲ್ದಾರ್ ಮಲ್ಲಿಕಾರ್ಜುನ ಅರಕೇರಿ ಅವರು ಸ್ವಾತಂತ್ರ್ಯೋತ್ಸವ ದಿನ ರಾಷ್ಟ್ರದ ಗೌರವದ ಸಂಕೇತವಾಗಿದ್ದು ಎಲ್ಲ ಸರ್ಕಾರಿ ಇಲಾಖೆ ಅಧಿಕಾರಿಗಳು,ಸ್ಥಳೀಯ ಸಂಸ್ಥೆಗಳು ಹಾಗೂ ಶಿಕ್ಷಣ ಸಂಸ್ಥೆಗಳು ಪರಸ್ಪರ ಸಹಕಾರದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸೂಚಿಸಿದರು. ಅಂದು ಮುಂಜಾನೆ 8:30 ಘಂಟೆಗೆ ಪಟ್ಟಣದ ಸರ್ಕಾರಿ ಕನ್ನಡ ಶಾಲೆ ಆವರಣದಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನದ ಪ್ರಮುಖ ಕಾರ್ಯಕ್ರಮಗಳಾದ ಧ್ವಜಾರೋಹಣ, ಮಕ್ಕಳ ಸಂಸ್ಕೃತಿಕ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ದೇಶಭಕ್ತಿ ಗೀತೆಗಳು, ಗಣ್ಯರ ಭಾಷಣ,ನಿವೃತ್ತ ಸೈನಿಕರಿಗೆ, ಪ್ರಗತಿಪರ ರೈತರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ, ಕುಡಿಯುವ ನೀರು, ಆಸನ ವ್ಯವಸ್ಥೆ, ಸ್ವಚ್ಛತೆ, ಪಥಸಂಚಲನ ಹಾಗೂ ಭದ್ರತಾ ವ್ಯವಸ್ಥೆ ಸೇ–ರಿದಂತೆ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಸಮಯಕ್ಕೆ ಪೂರ್ಣಗೊಳಿಸುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಪಟ್ಟಣದ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳು ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ರಾಷ್ಟ್ರ ಧ್ವಜವನ್ನು ನಿಯಮಾನುಸಾರ ಹಾ–ರಿಸಬೇಕು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ಹಬ್ಬದ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಎಲ್ಲ ಇಲಾಖೆಗಳು ತಮ್ಮ ಜವಾಬ್ದಾ–ರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು. ಸಭೆಯಲ್ಲಿ ಉಪಸ್ಥಿತ ಗಣ್ಯರಾದ ಜಿ.ಜಿ.ಮದರಕಲ್ಲ,ಗಂಗಾಧರ ಕಸ್ತೂರಿ ಹಾಗೂ ಪ್ರಭುಗೌಡ ಮದರಕಲ್ಲ ಅವರು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ನಿವೃತ್ತ ಪೊಲೀಸ್ ವ–ರಿಷ್ಠಾಧಿಕಾರಿ ಎಸ್ ಬಿ ಕಟ್ಟಿಮನಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ ಎಸ್ ಸಾವಳಗಿ, ಪಿಎಸ್ಐ ಜ್ಯೋತಿ ಖೋತ್, ಎನ್ ಜಿಒ ಅಧ್ಯಕ್ಷ ಚೌಧರಿ, ಎಂ ಜಿ. ಪಾಟೀಲ, ಎಂ ಎಚ್ ಕೆಂಭಾವಿ, ಸಿದ್ದನಗೌಡ ಪಾಟೀಲ ನಾವದಗಿ, ಇಬ್ರಾಹಿಂ ಮನ್ಸೂರ, ಶಶಿಧರ್ ಡಿಸಲೆ, ಅಮೀತಸಿಂಗ್ ಮನಗೂಳಿ, ನಾಗೇಶ ಕಟ್ಟಿಮನಿ, ಬಸನಗೌಡ ಮಾಲಪಾಟೀಲ, ಮೆಹಬೂಬಶಾ, ಮಕಾನದಾರ, ಮೋದಿನಾ ನಾಗಾರ್ಚಿ, ಬಬ್ಲು ಪಟೇಲ, ವಿಶ್ವನಾಥ ಪಾಟೀಲ ಸೇ–ರಿದಂತೆ ವಿವಿಧ ಇಲಾಖೆಗಳ ಅಧಿಕಾ–ರಿಗಳು, ವಿವಿಧ ಸಂಘಟನೆಯ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ರೋವರ್ಸ್ ಮತ್ತು ರೇಂಜರ್ಸ್ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್




**ತಾಳಿಕೋಟೆ: ವೀರಶೈವ ವಿದ್ಯಾವರ್ಧಕ ಸಂಘದ ಶ್ರೀ ಖಾಸತೇಶ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ಸ ಮತ್ತು ರೇಂಜರ್ಸ ಘಟಕದಿಂದ ಸ್ಕೌಟ್ಸ್ ರೋವರ್ಸ್ ಮತ್ತು ರೇಂಜರ್ಸ್ ಡೇ ಕಾರ್ಯಕ್ರಮವನ್ನು ಗುರುವಾರ ಆಯೋಜಿಸಿತ್ತು.**

ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ರೇಂಜರ್ಸ್ ಅಧಿಕಾರಿ ಸುಜಾತ ಚಲವಾದಿ ಅವರು ಸ್ಕೌಟ್ಸ್ ಸ್ಕಾರ್ಫ್ ಏಕತೆ, ಸೇವೆ , ನಾಯಕತ್ವ ಮತ್ತು ಜಾಗತಿಕ ಸಹೋದರತೆಯ ಸಂಕೇತವಾಗಿದೆ. ಪ್ರತಿಯೊಬ್ಬರು ಸೇವಾಮನೋಭಾವನೆ ಉಳ್ಳವರಾಗಬೇಕು ದೇಶಕ್ಕಾಗಿ ಸೇವೆಯನ್ನು ಮುಡಿಪಾಗಿಡಬೇಕು ಹಾಗೂ ಸೂರ್ಯೋದಯ ನೆನಪಿಗಾಗಿ ಅಗಸ್ಟ ಒಂದರಂದು ಸೂರ್ಯೋದಯ ಆಚ–'ರಣೆ ಮಾಡುವುದು ಮಹತ್ವದ್ದಾಗಿದೆ ಎಂದರು.

ರೋವರ್ಸ್ ಅಧಿಕಾರಿ ಅಶೋಕ ರಾಠೋಡ ಅವರು ಮಾತನಾಡಿ, ಸಮುದಾಯ ಸೇವೆ ಮತ್ತು ಪರಿಸರ ಚಟುವಟಿಕೆ, ರ್‍ಯಾಲಿ, ಶಿಬಿರ, ಜಾಗೃತಿ ಕಾರ್ಯಕ್ರಮಗಳು ಛಾಯಾಚಿತ್ರಗಳು ಮತ್ತು ಪೈಂಟಿಂಗ್ ಗಳ ಮೂಲಕ ಜಾಗೃತಿ ಮೂಡಿಸಲಾಗುವುದು ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಡಿ. ಬಿ. ಮೂಗಡ್ಲಿಮಠ ಅವರು ಸ್ಕೌಟ್ಸ್ ಸನ್ ರೈಸ್ ಮತ್ತು ವರ್ಲ್ಡ ಸ್ಕಾರ್ಫ್ ದಿನವು ಭರವಸೆ, ಸ್ನೇಹ ಮತ್ತು ಸೇವೆಯ ಹೊಸ ಉದಯವನ್ನು ಸಂಕೇತಿಸುತ್ತದೆ ಎಂದರು. ಪ್ರಥಮ ವರ್ಷದ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಸ್ಕಾರ್ಫ್ ಧ–ರಿಸುವುದರ ಮೂಲಕ ಪ್ರತಿಜ್ಞೆಯನ್ನು ಭೋದಿಸಿ ರೋವರ್ಸ್ ಮತ್ತು ರೇಂಜರ್ಸ್ ವಿಭಾಗಕ್ಕೆ ಸೇರ್ಪಡೆ ಮಾಡಲಾಯಿತು.

## ಹೆಚ್‌ಐವಿ ಏಡ್ಸ್ ಕುರಿತ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಇಂದಿನ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಯುಗದಲ್ಲಿ ಸಮಾಜದ ಸ್ವಾಸ್ಥ್ಯ ಕಾಪಾಡುವ ದೃಷ್ಟಿಯಿಂದ ಆರೋಗ್ಯ ಇಲಾಖೆಯು ಜಾರಿಗೆ ತಂದಿರುವ ಯೋಜನೆಗಳನ್ನು ಪ್ರತಿಯೊಬ್ಬರೂ ಸದುಪಯೋಗ ಪಡಿಸಿಕೊಳ್ಳುವ ಮೂಲಕ ವಿಶೇಷವಾಗಿ ಯುವಕ ಯುವತಿಯರು ಆರೋಗ್ಯ ಇಲಾಖೆಯ ಸ್ಕ್ಯಾನರ್ ಬಳಸಿ ತಮ್ಮ ಆರೋಗ್ಯದ ಸ್ಥಿತಿಗತಿಯನ್ನು ತಾವೇ ಸ್ವಯಂ ದೃಢೀಕರಿಸಿಕೊಳ್ಳುವ ಮತ್ತು ಅವಶ್ಯಕ ಆರೋಗ್ಯ ಸೇವೆ ಹಾಗೂ ಪರಿಹಾರ ಪಡೆಯುವ ಅವಕಾಶವಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಲಕೇರಿಯ ಸಮುದಾಯ ಆರೋಗ್ಯ ಕೇಂದ್ರ ಆಪ್ತ ಸಮಾಲೋಚಕರಾದ ಡಾ. ಸಂತೋಷ ಟೆಂಗಳಿ ಹೇಳಿದರು.**



ಅವರು ತಾಲ್ಲೂಕಿನ ಕಲಕೇರಿಗ್ರಾಮದಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕದ ಮಾರ್ಗದರ್ಶನದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಮತ್ತು ಆದರ್ಶ ಪ್ರಥಮದರ್ಜೆ ಕಲಾ ಮತ್ತು ವಿಜ್ಞಾನ ಕಾಲೇಜಿನ ಸಹಯೋಗದಲ್ಲಿ ನಡೆದ ಹೆಚ್‌ಐವಿ ಏಡ್ಸ್ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಶುಕ್ರವಾರ ಮಾತನಾಡಿದರು. ಆಪ್ತ ಸಮಾಲೋಚಕರಾದ ಅಪ್ಪಾಸಾಬ ಮಾಂಗ ಅವರು ಹದಿಹರೆಯದವರ ಆರೋಗ್ಯ ಮತ್ತು ಅದರಿಂದಾಗುವ ಸಮಸ್ಯೆಗಳು ಮತ್ತು ಮುಟ್ಟಿನ, ಲೈಂಗಿಕ ಮತ್ತು ಸಂತಾನೋತ್ಪತಿ, ಆರೋಗ್ಯದ ಕುರಿತು ಸಲಹೆ ನೀಡಿ ಹಲೋ ಮೈತ್ರಿ ಆರೋಗ್ಯ ಸಹಾಯವಾಣಿಯ ಉದ್ದೇಶ, ಉಪಯೋಗ ಮತ್ತು ಲಭ್ಯವಿರುವ ಆರೋಗ್ಯ ಸೇವೆಗಳ ಕುರಿತು ಮಾಹಿತಿ ನೀಡಿದರು. ವಿಶೇಷವಾಗಿ ಕಿಶೋರಾವಸ್ಥೆಯಲ್ಲಿನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸಮಸ್ಯೆಗಳು, ವೈಯಕ್ತಿಕ ಸ್ವಚ್ಛತೆ, ಪೌಷ್ಟಿಕ ಆಹಾರ, ಮಾಸಿಕ ಋತುಚಕ್ರದ ಆರೋಗ್ಯ, ಮಾನಸಿಕ ಒತ್ತಡ ಹಾಗೂ ಆರೋಗ್ಯ ಸಂಬಂಧಿತ ಅನುಮಾನಗಳ ಕುರಿತು ಸೂಕ್ತ ಮಾರ್ಗದರ್ಶನ ಪಡೆಯುವ ಕುರಿತು ಹಲ್ಲೋ ಮೈತ್ರಿ ಸಹಾಯವಾಣಿ ಸಂಖ್ಯೆ 0804–7104–234 ಗೆ ಕರೆಮಾಡಿ ಮಾತನಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಪ್ರಾಚಾರ್ಯ ಎಸ್.ಎಂ.ಸಜ್ಜನ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಆರೋಗ್ಯ ಸಮಸ್ಯೆಗಳು ಮತ್ತು ಸಂದೇಹಗಳನ್ನು ಮುಕ್ತವಾಗಿ ಹಂಚಿಕೊಳ್ಳುವಂತೆ ಹಾಗೂ ಅಗತ್ಯವಿದ್ದಲ್ಲಿ ಸೂಕ್ತ ಆರೋಗ್ಯ ಸೇವೆ ಮತ್ತು ಸಲಹೆಯನ್ನು ಪಡೆಯುವ ಮೂಲಕ ಆರೋಗ್ಯದ ಬಗ್ಗೆ ತಪ್ಪು ಕಲ್ಪನೆಗಳನ್ನು ದೂರ ಮಾಡಿ, ವೈಜ್ಞಾನಿಕ ಮಾಹಿತಿಯನ್ನು ಆಧರಿಸಿ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು. ಪಿಯು ಕಾಲೇಜಿನ ಪ್ರಾಚಾರ್ಯ ಅಜಯ್ ಬರಗಾಲಿ, ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಎಚ್.ಎ.ಮೋಮಿನ, ಉಪನ್ಯಾಸಕರಾದ ಆಬೀದ ಸಾಲೋಡಗಿ, ರುಕ್ಸಾನಾಬೇಗಂ ಹಿಪ್ಪರಗಿ, ಸಂಗೀತಾ ಟೆಂಗಳಿ, ಸದ್ದಾಂ ಬಡೇಘರ, ವಿನೋದ ನಂದಿಮಠ, ಮಲ್ಲಿಕಾರ್ಜುನ ಸಜ್ಜನ, ನಬಿಲಾಲ ದೊಡಮನಿ ಸೇರಿದಂತೆ ಇತರರು ಇದ್ದರು. ತಾಳಿಕೋಟೆ ತಾಲ್ಲೂಕಿನ ಕಲಕೇರಿಯಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಆದರ್ಶ ಪ್ರಥಮದರ್ಜೆ ಕಲಾ ಮತ್ತು ವಿಜ್ಞಾನ ಕಾಲೇಜಿನ ಸಹಯೋಗದಲ್ಲಿ ಹೆಚ್‌ಐವಿ ಏಡ್ಸ್ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಲಾಯಿತು.

## ಎದೆ ಹಾಲೇ ಮಗುವಿನ ಮೊದಲ ರೋಗನಿರೋಧಕ ಲಸಿಕೆ

### ಪ್ರಾಥಮಿಕ ಆರೋಗ್ಯ ಕೇಂದ್ರ ಮಟಮಾರಿ ವತಿಯಿಂದ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಣೆ




ನೈಜ್ಯ ದೆಸೆ ನ್ಯೂಸ್

**ಮಟಮಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮಟಮಾರಿ ವತಿಯಿಂದ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಯಿತು.**

ಕಾರ್ಯಕ್ರಮದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅರವಿಂದ್ ಕುಮಾರ್ ಮಾತನಾಡಿ, ಮಗು ಹುಟ್ಟಿದ ಅರ್ಧ ಗಂಟೆಯೊಳಗೆ ತಾಯಿ ನೀಡುವ ಎದೆ ಹಾಲು ಅಮೃತಕ್ಕೆ ಸಮಾನವಾಗಿದೆ. ತಾಯಂದಿರು ಮಗುವಿಗೆ ಎದೆ ಹಾಲು ನೀಡುವುದರಿಂದ ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವುದರ ಜೊತೆಗೆ ಆರೋಗ್ಯವಂತ ಸಮಾಜ ನಿರ್ಮಾಣಕ್ಕೂ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಮಗು ಹುಟ್ಟಿದ ದಿನದಿಂದ ಆರು ತಿಂಗಳವರೆಗೆ ಕೇವಲ ತಾಯಿ ಎದೆ ಹಾಲನ್ನೇ ನೀಡಬೇಕು. ಆರು ತಿಂಗಳ ನಂತರ ಪೂರಕ ಪೌಷ್ಟಿಕ ಆಹಾರದೊಂದಿಗೆ ಎರಡು ವರ್ಷದವರೆಗೆ ಎದೆ ಹಾಲು ನೀಡುವುದನ್ನು ಮುಂದುವರಿಸಬೇಕು. ಇದರಿಂದ ಮಕ್ಕಳನ್ನು ಶ್ವಾಸಕೋಶದ ಸೋಂಕು, ಜೀರ್ಣಾಂಗದ ಸೋಂಕು ಹಾಗೂ ಚರ್ಮದ ಸೋಂಕುಗಳಿಂದ ರಕ್ಷಿಸಲು ಸಹಾಯವಾಗುತ್ತದೆ. ತಾಯಂದಿರಲ್ಲಿ ಸ್ತನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುವಲ್ಲಿಯೂ ಸ್ತನ್ಯಪಾನ ಸಹಕಾ–ರಿಯಾಗಿದೆ ಎಂದು ತಿಳಿಸಿದರು.

ಹಿರಿಯ ಆರೋಗ್ಯ ನಿರೀಕ್ಷಕ ವಸಂತ ಮಾತನಾಡಿ, ಬಾಣಂತಿಯರು ಸಮತೋಲನ ಆಹಾರ ಸೇವಿಸುವುದು ಅತ್ಯಂತ ಅಗತ್ಯ. ಆರೋಗ್ಯ ಇಲಾಖೆ ನೀಡುವ ಕ್ಯಾಲ್ಸಿಯಂ ಮತ್ತು ಕಬ್ಬಿಣಾಂಶದ ಮಾತ್ರೆಗಳನ್ನು ನಿಯಮಿತವಾಗಿ ಸೇವಿಸಬೇಕು ಎಂದು ಸಲಹೆ ನೀಡಿದರು.

PHCO ವಿಜಯಲಕ್ಷ್ಮಿ ಮಾತನಾಡಿ, 1992ರಿಂದ ವಿಶ್ವದಾದ್ಯಂತ ಆಗಸ್ಟ್ ಮೊದಲ ವಾರವನ್ನು ವಿಶ್ವ ಸ್ತನ್ಯಪಾನ ಸಪ್ತಾಹವಾಗಿ ಆಚ–'ರಿಸಲಾಗುತ್ತಿದ್ದು, ಎದೆ ಹಾಲಿನ ಮಹತ್ವದ ಕು–ರಿತು ತಾಯಂದಿರಲ್ಲಿ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ತಾಯಿ ಎದೆ ಹಾಲೇ ಮಗುವಿಗೆ ಮೊದಲ ರೋಗನಿರೋಧಕ ಲಸಿಕೆಯಾಗಿದೆ. ಮಗುವಿಗೆ ನಿಗದಿತ ವೇಳಾಪಟ್ಟಿಯಂತೆ ಲಸಿಕೆಗಳನ್ನು ತಪ್ಪದೆ ಹಾಕಿಸಬೇಕು. ನವಜಾತ ಶಿಶುವಿಗೆ ದಿನಕ್ಕೆ ಸುಮಾರು 8ರಿಂದ 10 ಬಾರಿ ಎದೆ ಹಾಲು ನೀಡುವ ವಿಧಾನ ಹಾಗೂ ಕುಟುಂಬ ಕಲ್ಯಾಣ ಕ್ರಮಗಳ ಕುರಿತು ಅವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರಾದ ಸುಭದ್ರಾ, ವಿದ್ಯಾರಾಣಿ, ಉಮಾ, ಬಿ. ಲಕ್ಷ್ಮಿ ಹಾಗೂ ಎನ್. ಲಕ್ಷ್ಮಿ ಉಪಸ್ಥಿತರಿದ್ದರು. ಆಶಾ ಕಾರ್ಯಕರ್ತೆ ಚಂದ್ರಿಕಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಜಾಲಹಳ್ಳಿ ಗ್ರಾ.ಪಂ. ಮೀಸಲಾತಿ ಪುನರ್‌ಪರಿಶೀಲನೆಗೆ ಆಗ್ರಹ: ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಅಲ್ಪಸಂಖ್ಯಾತ ಮುಖಂಡರ ನಿರ್ಧಾರ

ನೈಜ್ಯ ದೆಸೆ ನ್ಯೂಸ್



**ಜಾಲಹಳ್ಳಿ: ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಜಾಲಹಳ್ಳಿ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಅಲ್ಪಸಂಖ್ಯಾತ ಸಮುದಾಯದ ಮುಖಂಡರು, ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರವರ್ಗ?2ಬಿ (ಮುಸ್ಲಿಂ) ಸಮುದಾಯಕ್ಕೆ ಸೂಕ್ತ ಮೀಸಲಾತಿ ಹಾಗೂ ಪ್ರಾತಿನಿಧ್ಯ ಕಲ್ಪಿಸಲಾಗಿಲ್ಲ ಎಂದು ಆರೋಪಿಸಿದರು.**

ಗ್ರಾಮ ಪಂಚಾಯಿತಿಯ ವಾರ್ಡ್‌ಗಳ ಮೀಸಲಾತಿ ಪಟ್ಟಿಯನ್ನು ಮರುಪ–ರಿಶೀಲಿಸಿ, ಅಲ್ಪಸಂಖ್ಯಾತ ಸಮುದಾಯಕ್ಕೆ ನ್ಯಾಯಸಮ್ಮತ ಪ್ರಾತಿನಿಧ್ಯ ಕಲ್ಪಿಸುವಂತೆ ಆಗ್ರಹಿಸಿ ಜಾಲಹಳ್ಳಿ ಗ್ರಾಮದ ಪ್ರಮುಖರು ಹಾಗೂ ಸಾರ್ವಜನಿಕರು ರಾಯಚೂರು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾ–ರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ.

ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು 9 ವಾರ್ಡ್‌ಗಳಿದ್ದು, ವಾರ್ಡ್ ಸಂಖ್ಯೆ 2, 3, 4, 5 ಹಾಗೂ 7ರಲ್ಲಿ ಮುಸ್ಲಿಂ ಸಮುದಾಯದ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಈ ವಾರ್ಡ್‌ಗಳಲ್ಲಿ ಮುಸ್ಲಿಂ ಮತದಾರರು ಚುನಾವಣಾ ಫಲಿತಾಂಶದ ಮೇಲೆ ಪ್ರಮುಖ ಪ್ರಭಾವ ಬೀರುವಷ್ಟು ಸಂಖ್ಯೆಯಲ್ಲಿದ್ದರೂ, ಪ್ರಸ್ತುತ ಪ್ರಕಟಗೊಂಡಿರುವ ಮೀಸಲಾತಿ ಪಟ್ಟಿಯಲ್ಲಿ ಪ್ರವರ್ಗ–2ಬಿ ಕೋಟಾಗೆ ಸೂಕ್ತ ಅವಕಾಶ ಹಾಗೂ ಪ್ರಾತಿನಿಧ್ಯ ಕಲ್ಪಿಸಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು. ಆದ್ದರಿಂದ ವಾರ್ಡ್ ಸಂಖ್ಯೆ 2, 3, 4, 5 ಹಾಗೂ 7ರಲ್ಲಿ ಅಲ್ಪಸಂಖ್ಯಾತ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಪರಿಗಣಿಸಿ, ಸೂಕ್ತ ವಾರ್ಡ್‌ಗೆ ಪ್ರವರ್ಗ–2ಬಿ ಮೀಸಲಾತಿಯನ್ನು ಮರುನಿಗದಿಪಡಿಸಬೇಕು ಎಂದು ಮುಖಂಡರು ಒತ್ತಾಯಿಸಿದರು. ಜಿಲ್ಲಾಡಳಿತವು ಪ್ರಕಟಿತ ಮೀಸಲಾತಿ ಪಟ್ಟಿಯನ್ನು ತಕ್ಷಣ ಪುನರ್‌ಪರಿಶೀಲಿಸಿ, ನಿಯಮಾನುಸಾರ ನ್ಯಾಯಯುತ ಕ್ರಮ ಕೈಗೊಂಡು ಅಲ್ಪಸಂಖ್ಯಾತ ಸಮುದಾಯಕ್ಕೆ ಅರ್ಹ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಲ್ಲಿಸುವ ಮನವಿಯಲ್ಲಿ ಆಗ್ರಹಿಸಲಾಗುವುದು ಎಂದು ಮುಖಂಡರು ತಿಳಿಸಿದರು.

ಈ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮದ ಅಲ್ಪಸಂಖ್ಯಾತ ಮುಖಂಡರಾದ ಗ್ರಾಮ ಪಂಚಾಯತ್ ಸದಸ್ಯರಾದ ಮಕ್ತುಮ್ ಪರಾಶಿ, ಅಬ್ದುಲ್ ರಹಮಾನ್ ಖುರೇಷಿ, ಅಲ್ಪಸಂಖ್ಯಾತ ಮುಖಂಡರಾದ ಹುಸೇನ್ ನಾಸಿ,ಮಹೇಬೂಬ್ ಸಾಬ್ ಸುರ್ನೋಬತ್, ನೂರ್ ಮಹಮ್ಮದ್ ಬಳಿಗೇರ್, ಅಬ್ದುಲ್ ನಬಿ ಸುರ್ನೋಬತ್, ಇಮಾಮ್ ಸಾಬ್ ಉದ್ದಾರ, ಮಕ್ತುಮ್ ರೌಡಲ್ಬಂಡ, ರಿಯಾಜ್ ಆರ್ತಿ, ಹೈದರ್ ಸಾಬ್ ಸುರ್ನೋಬತ್, ಅಮೀರ್ ಪಟೇಲ್, ಶಬ್ಬೀರ್ ಜಾಲಹಳ್ಳಿ ಸೇರಿದಂತೆ ಗ್ರಾಮದ ಹಲವು ಸಾರ್ವಜನಿಕರು ಉಪಸ್ಥಿತರಿದ್ದರು.

### ಮೀಸಲಾತಿ ಪಟ್ಟಿಯನ್ನು ಮರುಪರಿಶೀಲಿಸಬೇಕು: ಅಬ್ದುಲ್ ರಹಿಮಾನ್ ಖುರೇಷಿ

**ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರಹಿಮಾನ್ ಖುರೇಷಿ ಮಾತನಾಡಿ, "ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು 9 ವಾರ್ಡ್‌ಗಳಿವೆ. ಅವುಗಳಲ್ಲಿ 2, 3, 4, 5 ಹಾಗೂ 7ನೇ ವಾರ್ಡ್‌ಗಳಲ್ಲಿ ಮುಸ್ಲಿಂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಈ ವಾರ್ಡ್‌ಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಪ್ರವರ್ಗ?2ಬಿ ಮೀಸಲಾತಿ ಕಲ್ಪಿಸಲಾಗಿಲ್ಲ. ಆದ್ದರಿಂದ ಪ್ರಕಟಿತ ಮೀಸಲಾತಿ ಪಟ್ಟಿಯನ್ನು ಪುನರ್‌ಪರಿಶೀಲಿಸಿ, ಮುಸ್ಲಿಂ ಸಮುದಾಯದ ಜನಸಂಖ್ಯೆಯನ್ನು ಪರಿಗಣಿಸಿ ಸೂಕ್ತ ವಾರ್ಡ್‌ಗೆ 2ಬಿ ಮೀಸಲಾತಿ ಒದಗಿಸಬೇಕು" ಎಂದು ಒತ್ತಾಯಿಸಿದರು.**

ವರದಿ: ಖಾಜಾಹುಸೇನ್ ಬಾಬಾ ಜಾಲಹಳ್ಳಿ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101